ಜೂನ್ 2021, ಸಂಚಿಕೆ 2

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

# ಲೀಸಾ ಇಂಡಿಯ

ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಜೂನ್ 2021, ಸಂಚಿಕೆ 2**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫ್ಲೀಟ್ ರಿಂಗ್‌ರೋಡ್
ಮೂರನೇ ಫ್ಲೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91-080-26699512/ 26699522
ಫ್ಯಾಕ್ಸ್ +91-080-26699410
ಈಮೈಲ್: leisaindia@yahoo.co.in



**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್
**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ
**ಕನ್ನಡ ಅನುವಾದ**
ಹೇಮಾ ಹೆಬ್ಬಗೋಡಿ
**ಕನ್ನಡ ಅನುವಾದಗಳ ಸಮನ್ವಯ**
ವೀಣಾ ಮಾರ್ಕಾಂಡೆ
**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.
**ಪುಟ ವಿನ್ಯಾಸ**
ನಂದ ಕುಮಾರ್
**ಮುದ್ರಣ**
ಬ್ಲೂಸ್ಟ್ರೀಮ್ ಪ್ರಿಂಟಿಂಗ್, ಬೆಂಗಳೂರು
**ಮುಖಪುಟ ಚಿತ್ರ**
ಕೋವಿಡ್ ಸಮಯದಲ್ಲಿ ರೈತರು ಹವಾಮಾನ ಅಪ್ಲಿಕೇಶನ್ ಬಳಸಲು ಹೆಚ್ಚು ಕಲಿತರು
**ಚಿತ್ರ ಸೌಜನ್ಯ:** GEAG

## ಲೀಸಾ ಮ್ಯಾಗಜೀನ್
**ವಿವಿಧ ಆವೃತ್ತಿಗಳು**
ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಜೀನ್
**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು



**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**



**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


# ಪ್ರಿಯ ಓದುಗರೇ.

ಪ್ರಿಯ ಓದುಗರೇ,

ಲೀಸಾ ಇಂಡಿಯಾದ ಜೂನ್ 2021ರ ಸಂಚಿಕೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಸಂತಸವಾಗುತ್ತಿದೆ.ಈ ಸಂಚಿಕೆಯು ಮುಖ್ಯವಾಗಿ ಪೌಷ್ಟಿಕಾಂಶಯುಕ್ತ ಕೈತೋಟಗಳು ಮತ್ತು ಕೃಷಿಯಲ್ಲಿ ಹೊಸದಾಗಿ ಮೈದಳೆಯುತ್ತಿರುವ ಡಿಲ್‌ಪರಿಹಾರಗಳ ಕುರಿತು ಗಮನಕೇಂದ್ರೀಕರಿಸಿದೆ.

ಕೋವಿಡ್‌ಸಾಂಕ್ರಾಮಿಕ ಪಿಡುಗು ರೋಗನಿರೋಧಕತೆಯ ಪ್ರಾಮುಖ್ಯತೆಯನ್ನು ಮುನ್ನೆಲೆಗೆ ತಂದಿದೆ. ದೇಶದಾದ್ಯಂತ ಕೃಷಿಕರು, ನಾಗರಿಕರು ಸುರಕ್ಷಿತ ಆಹಾರವನ್ನು ಬೆಳೆಯುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆರೋಗ್ಯಪೂರ್ಣ, ಪೌಷ್ಟಿಕಾಂಶಯುಕ್ತ ಆಹಾರ ಪಡೆಯಲು ಯತ್ನಿಸುತ್ತಿದ್ದಾರೆ. ಕರ್ನಾಟಕದಲ್ಲಿ 'ಕುಟುಂಬ ಕೈತೋಟ'ಗಳನ್ನು ಯಶಸ್ವಿಯಾಗಿ ಪ್ರಚುರಪಡಿಸಲಾಗಿದೆ. ಇದು ಕುಟುಂಬಗಳಿಗೆ ಪೂರಕ ಪೌಷ್ಟಿಕಾಂಶಯುಕ್ತ ಆಹಾರವನ್ನು ಒದಗಿಸುವುದರೊಂದಿಗೆ ಹೆಚ್ಚುವರಿ ಆದಾಯ ಗಳಿಸಲು ನೆರವಾಗಿದೆ. ತಮ್ಮ ಮನೆಯ ಸುತ್ತಲ ಖಾಲಿ ಜಾಗಗಳನ್ನು ಬಳಸಿ ತಮ್ಮ ಕುಟುಂಬಗಳಿಗಾಗಿ ಪೌಷ್ಟಿಕಾಂಶಯುಕ್ತ ಆಹಾರ ಬೆಳೆದುಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

ಮತ್ತೊಂದೆಡೆ ನಗರಗಳಲ್ಲಿ ತರಕಾರಿಗಳನ್ನು ಬೆಳೆಯುವುದು ಜನಪ್ರಿಯವಾಗುತ್ತಿದೆ. ಕೇರಳ ಹಾಗೂ ತಮಿಳುನಾಡಿನಲ್ಲಿ ಹಲವರು ತಮ್ಮ ಹಿತ್ತಲಲ್ಲಿ, ಛಾವಣಿ ಮೇಲೆ ಲಾಕ್‌ಡೌನ್‌ಸಮಯದಲ್ಲಿ ತಮ್ಮ ಸಮಯವನ್ನು ಬಳಸಿ ತರಕಾರಿಗಳನ್ನು ಬೆಳೆದಿದ್ದಾರೆ. ಈ ಕ್ರಮಗಳು ಪರಿಸರವನ್ನು ಬಲಪಡಿಸುವುದರೊಂದಿಗೆ ಮರುಬಳಕೆ ಹಾಗೂ ಪುನರ್ಬಳಕೆಯ ಸಿದ್ಧಾಂತಗಳನ್ನು ಬಲಪಡಿಸುತ್ತಿದೆ. ಸಮುದಾಯ ಆಧಾರಿತ ನಗರ ಕೃಷಿಯ ಕ್ರಮಗಳು ಸೂಕ್ಷ್ಮತೆ, ವಿಮರ್ಶಾತ್ಮಕ ಜಾಗೃತಿ, ಭೂಮಿಯೊಡನೆಯ ಸಂಬಂಧ, ರೈತರು ಮತ್ತು ಪರಿಸರವ್ಯವಸ್ಥೆಯನ್ನು ಪರಿಣಾಮಕಾರಿಯಾಗಿಸಿದೆ.

ಕೃಷಿಯಲ್ಲಿನ ಡಿಲೀಕರಣವು ಭವಿಷ್ಯ ಮಾತ್ರವಲ್ಲದೆ ಇಂದಿನ ಜಾಗತಿಕ ಸತ್ಯವಾಗಿದೆ. ಕ್ರಾಪ್‌ಇನ್‌ಡಿಲ್‌ಸೊಲ್ಯೂಶನ್ಸ್‌ನವರು ರೈತರಿಗೆ ಕೌಶಲ್ಯಾಭಿವೃದ್ಧಿ ಮಾಡಿಕೊಂಡು ಭವಿಷ್ಯಕ್ಕೆ ಸನ್ನದ್ಧರಾಗಲು ನೆರವು ನೀಡುತ್ತಿದ್ದಾರೆ. ಜೊತೆಗೆ ತಮಿಳುನಾಡಿನ ಕೃಷಿ ಜನನಿ ಎನ್ನುವ ಮಾರುಕಟ್ಟೆ ವೇದಿಕೆಯು ವಿಕೇಂದ್ರಿಕರಣ ಹಾಗೂ ಪುನರುತ್ಪಾದನೆಗೆ ಒತ್ತುನೀಡುವ ಬದಲಿ ಮಾದರಿಯಾಗಿದೆ. ಜನನಿ ಗ್ರೋ ಮೊಬೈಲ್‌ತಂತ್ರಾಂಶವು ಸಣ್ಣ ರೈತರು ಪುನರುತ್ಪಾದಕ ಪದ್ಧತಿಗಳಿಗೆ ಬದಲಾಗಲು ಹಾಗೂ ತಮ್ಮ ಉತ್ಪನ್ನಗಳಿಗೆ ಸಾವಯವ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಪಡೆಯಲು ನೆರವು ನೀಡುತ್ತಿದೆ.

ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆಯೆಂದು ಭಾವಿಸಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗಾಗಿ ಕಾದಿರುತ್ತೇವೆ.

ಸಂಪಾದಕರು.

## ಲೀಸಾ LEISA www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**
**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.)
**ಖಜಾಂಚಿ** : ಡಾ. ಎನ್.ಜಿ.ಹೆಗಡೆ,
**ಸದಸ್ಯರು** : ಡಾ. ಟಿ.ಎಂ.ತ್ಯಾಗರಾಜನ್, ಡಾ. ಎ.ರಾಜಣ್ಣ, ಡಾ. ಸ್ಮಿತಾ ಪ್ರೇಮಚಂದರ್, ಶ್ರೀ ಅಶೋಕ್ ಚಟರ್ಜಿ, ಶ್ರೀಮತಿ ರೇಣುಕಾ ಚಿದಂಬರಂ
**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್


## ಮಿಸೆರಿಯೊರ್ MISEREOR www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್-ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ಕೃಷಿಯಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಕೆ

■ ಕೃಷ್ಣ ಕುಮಾರ್

ಕೃಷಿಯಲ್ಲಿ ಡಿಜಿಟಲೀಕರಣ ಎನ್ನುವುದು ಭವಿಷ್ಯದ ಸ್ಥಿತಿಯಲ್ಲ ಪ್ರಸ್ತುತ ಜಾಗತಿಕ ಕೃಷಿಯ ವಾಸ್ತವವಾಗಿದೆ. ಡಿಜಿಟಲ್ ತಂತ್ರಜ್ಞಾನಗಳು ಜಾಗತಿಕ ಕೃಷಿಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಕ್ರಾಪ್‌ಇನ್ಸ್ ಡಿಲ್ ಸೊಲ್ಯೂಷನ್ಸ್‌ನವರು ಕೃಷಿಕರಿಗೆ ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ನೆರವಾಗುತ್ತಿದೆ.

**4**



## ಕುಟುಂಬ ಕೈ ತೋಟಗಳು

■ ಗ್ರೀನ್ ಫೌಂಡೇಶನ್

’ಕುಟುಂಬ ಕೈ ತೋಟ’ಗಳನ್ನು ಕರ್ನಾಟಕದಲ್ಲಿ ಯಶಸ್ವಿಯಾಗಿ ಪ್ರಚುರಪಡಿಸಲಾಗಿದೆ. ಕುಟುಂಬಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲು ಹಾಗೂ ಆದಾಯ ಗಳಿಸಲು ಇದೊಂದು ದಾರಿಯಾಗಿದೆ.

**8**



## ನಗರ ಕೃಷಿಯ ಮೊದಲ ಹೆಜ್ಜೆಗಳು

■ ದೆಬೊರಾ ದತ್ತ

ನಗರ ಪ್ರದೇಶಗಳು ಆಹಾರದೊಂದಿಗಿನ ಸಂಬಂಧವನ್ನು ಆಹಾರದ ಉತ್ಪಾದನೆ, ಬಳಕೆ, ಹವಾಮಾನ ಬದಲಾವಣೆ, ಕೃಷಿಯ ಕೈಗಾರಿಕರಣ ಸ್ವರೂಪದಿಂದ ಭೂಮಿ ಹಾಳಾಗುತ್ತಿದ್ದು ಆಹಾರ ಭದ್ರತೆಗೆ ಎದುರಾಗಿರುವ ಸವಾಲುಗಳ ಹಿನ್ನಲೆಯಲ್ಲಿ ವಿಮರ್ಶಾತ್ಮಕವಾಗಿ ಯೋಚಿಸಬೇಕು. ಸಮುದಾಯ ಆಧಾರಿತ ನಗರ ಕೃಷಿಯ ಕ್ರಮಗಳು ಭೂಮಿ, ರೈತರು, ಪರಿಸರ ವ್ಯವಸ್ಥೆ ಕುರಿತಂತೆ ಸೂಕ್ಷ್ಮತೆ ಹಾಗೂ ವಿಮರ್ಶಾತ್ಮಕ ಅರಿವನ್ನು ಮೂಡಿಸುವಲ್ಲಿ ಪರಿಣಾಮಕಾರಿ ವಿಧಾನವಾಗಿದೆ.

**10**



## ಸ್ಥಳೀಯವಾಗಿ ತರಕಾರಿಗಳ ಕೃಷಿ

■ ಉಷಾ ಎಸ್, ಮಂಜು ಎಂ ನಾಯರ್ ಮತ್ತು ದೇವಿಕ ಎ ಎಸ್

ಕೋವಿಡ್ ಪಿಡುಗಿನ ಸಮಯದಲ್ಲಿ ಪ್ರತಿರೋಧಕ ಶಕ್ತಿಯನ್ನು ಗಳಿಸುವುದು ಹಿಂದೆಂದಿಗಿಂತ ಮಹತ್ವವನ್ನು ಪಡೆದುಕೊಂಡಿತು. ಕೇರಳದ ಜನ ತಮ್ಮ ಹಿತ್ತಿಲಲ್ಲಿ, ಛಾವಣಿಗಳಲ್ಲಿ ಸುರಕ್ಷಿತ ಆಹಾರವನ್ನು ಬೆಳೆಯಲು ಸಾಕಷ್ಟು ವಿಧಾನಗಳನ್ನು ಪ್ರಯತ್ನಿಸಿದರು. ಆ ಮೂಲಕ ಆರೋಗ್ಯಕರ ಪೌಷ್ಟಿಕಾಂಶ ಆಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ಬಯಸಿದರು.

**13**



## ಪುನರುತ್ಪಾದಕ ಕೃಷಿವಿಜ್ಞಾನದ ಸಲಕರಣೆಯಾಗಿ ತಂತ್ರಜ್ಞಾನದ ಬಳಕೆ

■ ಉಷಾ ದೇವಿ ವೆಂಕಟಾಚಲಂ

ಸಾಂಪ್ರದಾಯಿಕ ಡಿಜಿಟಲ್ ಮಾರುಕಟ್ಟೆಯ ವೇದಿಕೆಗಳು ಕೇವಲ ಬಳಕೆಗಷ್ಟೆ ಗಮನ ನೀಡುತ್ತವೆ. ತಮಿಳುನಾಡಿನ ಕೃಷಿಜನನಿ ಎನ್ನುವ ವೇದಿಕೆಯು ವಿಕೇಂದ್ರಿಕರಣ ಮತ್ತು ಪುನರುತ್ಪಾದನೆಗೆ ಒತ್ತು ನೀಡುವ ಬದಲಿ ಮಾದರಿಯಾಗಿದೆ. ಜನನಿ ಗ್ರೋ ಮೊಬೈಲ್ ತಂತ್ರಾಂಶವು ಸಣ್ಣ ರೈತರಿಗೆ ಪುನರುತ್ಪಾದನಾ ಪದ್ಧತಿಗಳ ಕುರಿತು ತಿಳಿಸಿಕೊಡುತ್ತದೆ. ಜೊತೆಗೆ ಇದು ಅವರ ಉತ್ಪನ್ನಗಳಿಗೆ ಉತ್ತಮ ಬೆಲೆ ತಂದುಕೊಡುವ ಸಾವಯವ ಮಾರುಕಟ್ಟೆ ಒದಗಿಸುತ್ತದೆ.

**16**



## ನಮ್ಮ ಕೈತೋಟ ನಮ್ಮ ಬದುಕು

■ ಸುರೇಶ್ ಕಣ್ಣ

ಪ್ರಪಂಚದಾದ್ಯಂತ ‘ನಿಮ್ಮ ಆಹಾರವನ್ನು ನೀವೇ ಬೆಳೆಯಿರಿ’ ಎನ್ನುವ ಸಿದ್ಧಾಂತ ನಗರ, ಪಟ್ಟಣಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಮಿಂಚಿನ ವೇಗದಲ್ಲಿ ನಡೆಯುತ್ತಿರುವ ನಗರೀಕರಣವು ರಸ್ತೆಗಳನ್ನು, ನೀರನ್ನೂ ಘನತ್ಯಾಜ್ಯದಿಂದ ಮಲಿನಗೊಳಿಸುತ್ತಿದೆ. ಬಡತನ ಹೆಚ್ಚಲು ಇಂಧನ ಹಾಗೂ ನೀರಿನ ಕೊರತೆ ಹೆಚ್ಚಲು ಕಾರಣವಾಗಿದೆ. ಪ್ರತಿಮನೆಯಲ್ಲೂ ಹಿತ್ತಲ ಇಲ್ಲವೇ ತಾರಸಿ ಮೇಲೆ ಕೈತೋಟ ಮಾಡುವುದು ಈ ಸಮಸ್ಯೆಯೆದುರಿಸಲು ನೆರವು ನೀಡಬಹುದು. ನಗರದಲ್ಲಿ ಹಸಿರನ್ನು ಉಳಿಸಿಕೊಳ್ಳಲು ಈ ತಂತ್ರ ನೆರವಾಗುತ್ತದೆ.

**19**

# ಕೃಷಿಯಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಕೆ

**ಕೃಷ್ಣ ಕುಮಾರ್**

**ಕೃಷಿಯಲ್ಲಿ ಡಿಜಿಟಲೀಕರಣ ಎನ್ನುವುದು ಭವಿಷ್ಯದ ಸ್ಥಿತಿಯಲ್ಲ ಪ್ರಸ್ತುತ ಜಾಗತಿಕ ಕೃಷಿಯ ವಾಸ್ತವವಾಗಿದೆ. ಡಿಜಿಟಲ್ ತಂತ್ರಜ್ಞಾನಗಳು ಜಾಗತಿಕ ಕೃಷಿಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಕ್ರಾಪ್‌ಇನ್ಸ್ ಡಿಜಿಟಲ್ ಸೊಲ್ಯೂಷನ್ಸ್‌ನವರು ಕೃಷಿಕರಿಗೆ ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ನೆರವಾಗುತ್ತಿದೆ.**

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಕೃಷಿಯಲ್ಲಿ ಕ್ರಾಂತಿ ಮಾಡುತ್ತಿದ್ದು ಉತ್ತಮ ಭವಿಷ್ಯವನ್ನು ರೂಪಿಸಿಕೊಂಡು ರೈತರು ತಮ್ಮ ಬದುಕನ್ನುಉತ್ತಮಗೊಳಿಸಿಕೊಳ್ಳುವಂತೆ ಮಾಡುತ್ತಿದೆ. ಇದು ಗ್ರಾಮೀಣ ಸಮುದಾಯಕ್ಕೆ ತಂತ್ರಜ್ಞಾನ, ನೈಸರ್ಗಿಕ ಸಂಪನ್ಮೂಲಗಳು, ಸುಧಾರಿತ ಕೃಷಿ ತಂತ್ರಜ್ಞಾನಗಳು, ಪರಿಣಾಮಕಾರಿ ಉತ್ಪಾದನಾ ತಂತ್ರಗಳು, ಮಾರಕಟ್ಟೆಯ ಲಭ್ಯತೆ ಹೀಗೆ ಇನ್ನೂ ಹೆಚ್ಚಿನದನ್ನು ಆಧುನಿಕ ತಂತ್ರಜ್ಞಾನವು ನೀಡುತ್ತಿದೆ.

2010ರಲ್ಲಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಕೃಷಿ ಬಿಕ್ಕಟ್ಟು ಎದುರಾಯಿತು. ಆಗ ಸ್ಥಳೀಯ ರೈತರಿಗೆ ಆರ್ಥಿಕ ಸಹಾಯವಿಲ್ಲದೆ, ಹವಾಮಾನ ವೈಪರಿತ್ಯಗಳು, ಮಣ್ಣಿನ ಗುಣಮಟ್ಟ ಹಾಳಾದದ್ದು, ಕೀಟ, ರೋಗ ಭಾದೆಗಳು, ಇಳುವರಿಯನ್ನು ನಿಖರವಾಗಿ ಊಹಿಸಲಾಗದೆ ಹೋದದ್ದು ಎಲ್ಲವೂ ತೊಡಕುಗಳಾಗಿದ್ದವು. ಶ್ರೀ ಕೃಷ್ಣ ಕುಮಾರ್ ಅವರು ರೈತರ ಆತ್ಮಹತ್ಯೆಗಳನ್ನು ತಡೆದು ಈ ಬಿಕ್ಕಟ್ಟನ್ನು ಪರಿಹರಿಸಲು ತಮ್ಮಿಂದಾದಷ್ಟು ಪ್ರಯತ್ನಿಸಲು ಮುಂದಾದರು. ಅವರು ತಮ್ಮ ವೃತ್ತಿಗೆ ರಾಜಿನಾಮೆ ನೀಡಿ ಕ್ರಾಪ್‌ಇನ್ ಟೆಕ್ನಾಲಜಿ ಸೊಲ್ಯೂಷನ್ಸ್ ಎನ್ನುವ ಕೃಷಿ ತಂತ್ರಜ್ಞಾನದ ಉದ್ಯಮವನ್ನು ಆರಂಭಿಸಿದರು. ದೇಶದ ಮಿಲಿಯನ್‌ಗಟ್ಟಲೇ ರೈತರ ನೋವಿಗೆ ಸ್ಪಂದಿಸಲು ಈ ಉದ್ಯಮವು ಮುಂದಾಯಿತು.

ಪ್ರತಿ ಎಕರೆಯ ಮೌಲ್ಯವರ್ಧನೆಯನ್ನು ತಂತ್ರಜ್ಞಾನದ ಮೂಲಕ ಮಾಡುವ ಉದ್ದೇಶದೊಂದಿಗೆ ಕ್ರಾಪ್‌ಇನ್ ಆರಂಭವಾಯಿತು. ಡಿಜಿಟಲ್ ತಂತ್ರಜ್ಞಾನ ಮತ್ತು ಡೇಟಾ ವಿಶ್ಲೇಷಣೆಯ ಮೂಲಕ ರೈತರ ಬದುಕನ್ನು ಉತ್ತಮಗೊಳಿಸಲು ಮತ್ತು ಕೃಷಿ ಸೇವೆಯಲ್ಲಿರುವವರಿಗೆ ನೆರವು ನೀಡಲು ಮುಂದಾಯಿತು. ಕ್ರಾಪ್‌ಇನ್ ಕೇವಲ ಇದೊಂದಕ್ಕೆ ಸೀಮಿತವಾಗಿಲ್ಲ. ಅದು ಹಲವು ವಿಭಾಗಗಳನ್ನು ಒಳಗೊಂಡಿದೆ. ಆಯಾ ಪ್ರದೇಶ ಮತ್ತು ಅಗತ್ಯತೆಗೆ ತಕ್ಕಂತೆ ಪ್ರತಿ ವಿಭಾಗದ ಉತ್ಪನ್ನವು ಭಿನ್ನವಾಗಿರುತ್ತದೆ. ಕ್ರಾಪ್‌ಇನ್‌ನ

**ಕ್ರಾಪ್‌ಇನ್ ಸ್ಮಾರ್ಟ್‌ಫಾರಂನವರು ರೈತರಿಗೆ ಉತ್ತಮ ಪದ್ಧತಿಗಳ ಕುರಿತು ಸಲಹೆಗಳನ್ನು ಕಳಿಸುವುದರ ಮೂಲಕ ಅವರನ್ನು ಸದಾ ಸಕ್ರಿಯವಾಗಿರಿಸುತ್ತದೆ**



ಫೋಟೋ : ಕ್ರಾಪ್‌ಇನ್

ತಂತ್ರಜ್ಞಾನವು ಮಾಹಿತಿ ಆಧಾರಿತವಾಗಿದ್ದು ಕೃಷಿ ಪರಿಸರವ್ಯವಸ್ಥೆಯಲ್ಲಿರುವ ಎಲ್ಲ ಭಾಗೀದಾರರನ್ನು ಒಂದೆಡೆ ಬೆಸೆಯುತ್ತದೆ. ಕ್ರಾಪ್ಇನ್ ಕೃಷಿವ್ಯವಹಾರಕ್ಕೆ ಸಂಬಂಧಿಸಿದ ವ್ಯವಹಾರಕ್ಕೆ ಬದ್ಧವಾದ ವಿಶಿಷ್ಟ ವಿನೂತನ ಉತ್ಪನ್ನಗಳನ್ನು ರೂಪಿಸುತ್ತಿರುವ ಸಂಸ್ಥೆ. ಇದು ಕೃಷಿವ್ಯವಹಾರದ ವಿವಿಧ ಹಂತಗಳಿಗೆ ಪರಿಹಾರಗಳನ್ನು ಒದಗಿಸುತ್ತದೆ. ಕೃಷಿ, ಪ್ರೊಸೆಸಿಂಗ್ ಕಂಪನಿಗಳು, ಅಗ್ರಿಗೇಟರ್ಸ್, ರಫ್ತುದಾರರು, ಫುಡ್ ರಿಟೈಲರ್‌ಗಳು, ಟ್ರೇಡರ್‌ಗಳು, ಅಗ್ರಿ ಇನ್‌ಪುಟ್ ಕಂಪನಿಗಳು ಅಂದರೆ ಕೃಷಿ ಯಂತ್ರಗಳು, ಬೀಜಗಳು, ರಸಗೊಬ್ಬರಗಳು, ಪೌಷ್ಟಿಕಾಂಶಗಳು, ಕೀಟನಾಶಕಗಳು ಇತ್ಯಾದಿಗಳನ್ನು ನಿರ್ವಹಿಸುವ ವಿಭಾಗಗಳನ್ನು ಒಳಗೊಂಡಿದೆ. ಬ್ಯಾಂಕಿಂಗ್ ಮತ್ತು ಆರ್ಥಿಕ ಸಂಸ್ಥೆಗಳು, ಬೆಳೆ ವಿಮಾ ಕಂಪನಿಗಳು, ಡೆವಲಪ್‌ಮೆಂಟ್ ಏಜೆನ್ಸಿಗಳು, ಎನ್‌ಜಿಒಗಳು ಮತ್ತು ಸರ್ಕಾರಿ ಸಂಸ್ಥೆಗಳು; ರೈತರು – ಇವರೆಲ್ಲರನ್ನೂ ಅಗ್ರಿಬಿಜಿನೆಸ್ ಒಳಗೊಂಡಿರುತ್ತದೆ.

ಕ್ರಾಪ್ಇನ್ ಟೆಕ್ನಾಲಜಿಸ್‌ನವರು ಅಭಿವೃದ್ಧಿಪಡಿಸಿದ ಮಾಹಿತಿ ತಂತ್ರಜ್ಞಾನವು ಕಳೆದ ದಶಕದಲ್ಲಿ ಕೃಷಿವಲಯದಲ್ಲಿ ಮಹತ್ತರ ಬದಲಾವಣೆಯನ್ನು ತಂದಿದೆ. ಅದು ಜಾಗತಿಕವಾಗಿ ರೈತರಲ್ಲಿ ತರಲು ಉದ್ದೇಶಿಸಿದ್ದ ಅಭಿವೃದ್ಧಿಯನ್ನು ಫಲಿತಾಂಶಗಳಲ್ಲಿ ಕಾಣಬಹುದಾಗಿದೆ.

## ಯಶೋಗಾಥೆಗಳು

ಕ್ರಾಪ್ಇನ್ ಕೃಷಿವಲಯದಲ್ಲಿ ಇಂದು ಮೊದಲಿಗನಾಗಿದೆ. ತಂತ್ರಜ್ಞಾನ ವಿಷಯದಲ್ಲಿ ಮಾತ್ರವಲ್ಲದೆ ಅಭಿವೃದ್ಧಿ ಏಜೆನ್ಸಿಗಳು ಮತ್ತು ಸಂಸ್ಥೆಗಳೊಡನೆಯ ಸಹಯೋಗದಿಂದ ಅದು ಸಮಾಜೋಆರ್ಥಿಕ ವ್ಯವಸ್ಥೆಯ ಮೇಲೂ ಪರಿಣಾಮ ಬೀರಿದೆ.

### ಅ) ದ ಟಾಟ ಸಿನಿ ಪ್ರಾಜೆಕ್ಟ್

ಕ್ರಾಪ್ಇನ್ ಟಾಟಾ ಟ್ರಸ್ಟಿನವರು ಸ್ಥಾಪಿಸಿರುವ ಕಲೆಕ್ಟೀವ್ಸ್ ಫಾರ್ ಇಂಟಿಗ್ರೇಟೆಡ್ ಲೈವ್ಲಿಹುಡ್ ಇನ್ನಿಯೇಟೀವ್ಸ್ (ಸಿನಿ) ಎನ್ನುವ ಜನಸೇವಾ ಸಂಸ್ಥೆಯೊಂದಿಗೆ ಪಾಲುದಾರಿಕೆ ಮಾಡಿಕೊಂಡಿದೆ. ಈ ಸಂಸ್ಥೆಯು ಮಧ್ಯ ಭಾರತದ ಬುಡಕಟ್ಟು ಸಮುದಾಯದ ಬದುಕನ್ನು ಉತ್ತಮಗೊಳಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ. ಏಪ್ರಿಲ್ 2015ರಂದು ಸಿನಿ ತನ್ನ ಮಹತ್ವಾಕಾಂಕ್ಷಿ ಯೋಜನೆಯಾದ 'ಮಿಷನ್ 2020 : ಲಕ್ಪತಿ ಕಿಸಾನ್ – ಸ್ಮಾರ್ಟ್ ವಿಲೇಜಸ್' ಆರಂಭಿಸಿತು. 101,000 ಕುಟುಂಬಗಳನ್ನು ಬಡತನದಿಂದ ಮುಕ್ತಗೊಳಿಸಿ ಅವರ ಜೀವನಮಟ್ಟದ ಸುಧಾರಣೆ ಇದರ ಉದ್ದೇಶವಾಗಿತ್ತು. ಜೊತೆಗೆ ಮಹಾರಾಷ್ಟ್ರ, ಗುಜರಾತ್, ಜಾರ್ಖಂಡ್, ಒರಿಸ್ಸಾ ಹೀಗೆ 17 ವಿಭಾಗಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಯಿತು.

101,000 ಕುಟುಂಬಗಳಲ್ಲಿ ಪ್ರತಿಕುಟುಂಬವು ಮೊದಲು ವಾರ್ಷಿಕ $530 ಗಳಿಸುತ್ತಿತ್ತು. ಈಗ ಪ್ರತಿವರ್ಷ $1590 ಅಥವ ಅದಕ್ಕಿಂತ ಹೆಚ್ಚಿನದನ್ನು ಗಳಿಸಲಾರಂಭಿಸಿತು. ಪ್ರಸ್ತುತ ಈ ಯೋಜನೆಯು ಸುಮಾರು 70,000 ಕುಟುಂಬಗಳ ಮೇಲೆ ಇತ್ಯಾತ್ಮಕ ಪರಿಣಾಮ ಬೀರಿದೆ.

**ನಿಯಮಿತವಾಗಿ ಎದುರಿಸುವ ಹವಾಮಾನ ವೈಪರಿತ್ಯದ ಸಮಸ್ಯೆಗಳು ಮತ್ತು ಹವಾಮಾನ ಬದಲಾವಣೆಯ ವಿರುದ್ಧ ತಾಳಿಕೆಯನ್ನು ಬೆಳೆಸಿಕೊಳ್ಳುವುದು ಇಂದು ಭಾರತದ ರೈತರು ಎದುರಿಸುತ್ತಿರುವ ದೊಡ್ಡ ಸವಾಲುಗಳಲ್ಲೊಂದು.**

ರೈತರ ಸಾಮರ್ಥ್ಯವರ್ಧನೆಯನ್ನು ಗುರಿಯಾಗಿಸಿಕೊಂಡಿರುವ ಸಿನಿ ಅದನ್ನು ಕ್ರಾಪ್ಇನ್‌ನವರ ಸ್ಮಾರ್ಟ್‌ಫಾರಂ ಸೊಲ್ಯೂಶನ್ ನೆರವಿನಿಂದ ಸಾಧಿಸಿದೆ. ಕ್ಷೇತ್ರಾಧಿಕಾರಿಗಳು ರೈತರೊಂದಿಗೆ ದಿನವೂ ಸಂಪರ್ಕದಲ್ಲಿದ್ದು ಸ್ಮಾರ್ಟ್‌ಫಾರಂನ ಮಾಡ್ಯೂಲ್‌ಗಳ ಮೂಲಕ ಮಾಹಿತಿಗಳನ್ನು ಸಂಗ್ರಹಿಸುತ್ತಾರೆ. ಈ ಮಾಹಿತಿಯನ್ನು ಕೇಂದ್ರೀಕೃತ ಕ್ಲೌಡ್ ವೇದಿಕೆಯಲ್ಲಿ ಸಂಗ್ರಹಿಸಿಡಲಾಗುತ್ತದೆ. ಇಲ್ಲಿ ಸಂಗ್ರಹಿತವಾದ ಮಾಹಿತಿಯಿಂದ ಭಾಗಿದಾರರಿಗೆ ನಿರ್ಧಾರ ತೆಗೆದುಕೊಳ್ಳಲು ಸಹಾಯವಾಗುತ್ತದೆ.


ಕ್ರಾಪ್ಇನ್‌ನ ಸಹಯೋಗದಿಂದಾಗಿ ಸಿನಿಯು ಸ್ಮಾರ್ಟ್‌ಫಾರಂನ ನೆರವಿನಿಂದ ಬೆಳೆಯ ಪ್ರತಿ ಹಂತದ ಮೇಲೂ ನಿಗಾವಹಿಸುತ್ತಿದೆ. ಜಾರ್ಖಂಡನ ಗೊಡಬಂದ, ಧಲ್ಬುಮಗಢ್ ಪ್ರದೇಶಗಳ ಸುಮಾರು 4,300 ರೈತರ ಬದುಕಿನಮಟ್ಟವನ್ನು ಸುಧಾರಿಸಿದರು. ಕ್ರಾಪ್ಇನ್ ಮತ್ತು ಸಿನಿಯವರು ಸೇರಿ 3,400+ ಭೂಮಿಯ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಿದರು. ರೈತರು ಮತ್ತು ಜಮೀನಿನ ನಿಖರ ಮಾಹಿತಿಯನ್ನು ದಾಖಲಿಸಿದರು.

ಸ್ಮಾರ್ಟ್‌ಫಾರಂನವರು ನಂತರ ರೈತರಿಗೆ ಉತ್ತಮ ಪದ್ಧತಿಗಳ ಕುರಿತು ಸಲಹೆಗಳನ್ನು ನೀಡುತ್ತಾರೆ. ಉದಾಹರಣೆಗೆ ರಾಸಾಯನಿಕ ಒಳಸುರಿಯುವಿಕೆಗಳ ಸೂಕ್ತ ಬಳಕೆಯ ಮೂಲಕ ಇಳುವರಿಯನ್ನು ಉತ್ತಮಗೊಳಿಸುವುದು. ಸ್ಮಾರ್ಟ್‌ಫಾರಂನ ಮಾಡ್ಯೂಲ್‌ಗಳು ಬಳಸಲು ಸುಲಭವಾಗಿದ್ದು ಕ್ಷೇತ್ರಸಿಬ್ಬಂದಿ ವರ್ಗದವರು ದಿನವೂ ರೈತರೊಂದಿಗೆ ಸಂವಾದಿಸುವ ಮೂಲಕ ಜಮೀನಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಇದನ್ನು ಕ್ರಾಪ್ಇನ್ ಕೇಂದ್ರೀಕೃತ ಕ್ಲೌಡ್ ವೇದಿಕೆಯಲ್ಲಿ ಸಂಗ್ರಹಿಸಿಡಲಾಗುತ್ತದೆ. ಇದನ್ನು ಭಾಗಿದಾರರು ಬಳಸಿಕೊಂಡು ನಿರ್ಣಯ ಕೈಗೊಳ್ಳಬಹುದು. ಸ್ಮಾರ್ಟ್‌ಫಾರಂ ಇಳುವರಿಯನ್ನು ವಿಶ್ಲೇಷಿಸಲು, ಇಳುವರಿಯ ಪ್ರಮಾಣ ತಿಳಿಯಲು ನೆರವು ನೀಡುತ್ತದೆ. ಇದರಿಂದ ಸಿನಿಯವರು ತಮ್ಮ ಪ್ರಯತ್ನ ಎಷ್ಟರಮಟ್ಟಿಗೆ ಯಶಕಂಡಿದೆ ಎಂದು ತಿಳಿಯಬಹುದು.

ಕ್ರಾಪ್ಇನ್ ತಂತ್ರಜ್ಞಾನದೊಂದಿಗೆ ಬೆಸೆದ ಮಾಹಿತಿಯು ಕೃಷಿಸಮುದಾಯಗಳ ತಾಳಿಕೆಯನ್ನು ಅಭಿವೃದ್ಧಿಪಡಿಸಲು ಕ್ರಾಪ್ಇನ್ ತಂತ್ರಜ್ಞಾನ ಮತ್ತು ಮಾಹಿತಿಯು ಕೃಷಿಸಮುದಾಯಗಳ ಪೌಷ್ಟಿಕಾಂಶ ಸುಧಾರಣೆ, ಆರ್ಥಿಕ ಬೆಳವಣಿಗೆ, ಸುಸ್ಥಿರತೆ ಮತ್ತು ಉತ್ಪಾದಕತೆಯ ಸುಧಾರಣೆ ಮಾಡುತ್ತದೆ ಎಂದು ನಂಬುತ್ತದೆ. ಈ ಗುರಿಯನ್ನು ತಲುಪಲು ಒಳ್ಳೆಯ ಕೃಷಿ ಪದ್ಧತಿಗಳು ಅಗತ್ಯ. ಕ್ರಾಪ್ಇನ್ ರೈತರು ಈ ಪದ್ಧತಿಗಳನ್ನು ಯಶಸ್ವಿಯಾಗಿ ಅಳವಡಿಸಿಕೊಳ್ಳಲು ನೆರವು ನೀಡಿತು. ಜೀವಿಕ ಯೋಜನೆಯಡಿ ಭವಿಷ್ಯದ ಹವಾಮಾನ ವೈಪರಿತ್ಯವನ್ನು ಎದುರಿಸಲು ಸಿದ್ಧಗೊಳಿಸಿದೆ.

### ಆ) ಜೀವಿಕ – ದ ಎಸ್‌ಎಲ್‌ಎಸಿಸಿ ಯೋಜನೆ

ಭಾರತದ ಸುಸ್ಥಿರ ಬದುಕು ಮತ್ತು ಹವಾಮಾನ ಬದಲಾವಣೆಯ ಅಳವಡಿಕೆ (ಎಸ್‌ಎಲ್‌ಎಸಿಸಿ) ಯೋಜನೆಯನ್ನು ಭಾರತ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಬದುಕಿನ ಯೋಜನೆಯ ಸಹಯೋಗದೊಂದಿಗೆ ವಿಶ್ವಬ್ಯಾಂಕಿನ ನೆರವಿನೊಂದಿಗೆ ನಡೆಸುತ್ತಿದೆ. ಸಾರ್ವಜನಿಕ – ಖಾಸಗಿ ಸಹಭಾಗಿತ್ವದ ಈ ಯೋಜನೆಯು ಕ್ರಾಪ್ಇನ್ ಅನ್ನು ತಮ್ಮ ಪಾಲುದಾರನನ್ನಾಗಿಸಿಕೊಂಡಿತು. ಆ ಮೂಲಕ ತಂತ್ರಜ್ಞಾನವನ್ನು ಭಾರತೀಯ ರೈತರ ಮನೆಬಾಗಿಲಿಗೆ ತಲುಪಿಸಿತು. ಈ ಯೋಜನೆಯು ರೈತರು ಹವಾಮಾನ ತಾಳಿಕೆಯ ಪದ್ಧತಿಗಳು, ಹವಾಮಾನ ಬದಲಾವಣೆ ಅಥವ ಅನಿಶ್ಚಿತತೆಯನ್ನು ಎದುರಿಸಲು ಸನ್ನದ್ಧರನ್ನಾಗಿಸುವ ಗುರಿಯನ್ನು ಹೊಂದಿದೆ.




ನಿಯಮಿತವಾಗಿ ಎದುರಿಸುವ ಹವಾಮಾನ ವೈಪರಿತ್ಯದ ಸಮಸ್ಯೆಗಳು ಮತ್ತು ಹವಾಮಾನ ಬದಲಾವಣೆಯ ವಿರುದ್ಧ ತಾಳಿಕೆಯನ್ನು ಬೆಳೆಸಿಕೊಳ್ಳುವುದು ಇಂದು ಭಾರತದ ರೈತರು ಎದುರಿಸುತ್ತಿರುವ ದೊಡ್ಡ ಸವಾಲುಗಳಲ್ಲೊಂದು. ಬಿಹಾರ್ ಮತ್ತು ಮಧ್ಯಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಹವಾಮಾನ ತಾಳಿಕೆಯ ಪರಿಹಾರಗಳನ್ನು ಡಿಜಿಟಲ್ ತಂತ್ರಾಂಶದ ಮೂಲಕ ಕೃಷಿಯ ಅಗತ್ಯತೆಗಳನ್ನು ಪೂರೈಸಲು ಬಳಸಲಾಯಿತು. ಇದನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಿಹಾರ ಮತ್ತು ಮಧ್ಯಪ್ರದೇಶಗಳ ರಾಜ್ಯ ಗ್ರಾಮೀಣ ಬದುಕಿನ ಮಿಷನ್ ಸಹಯೋಗದೊಂದಿಗೆ ಕ್ರಾಪ್‌ಇನ್ ಟೆಕ್ನಾಲಜಿ ಕೈಗೊಂಡಿತು. ಕ್ರಾಪ್‌ಇನ್‌ನವರು ಡಿಜಿಟಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದ್ದು ಅದರ ಮೂಲಕ ರೈತರಿಗೆ ಕೊಯ್ಲು, ಹವಾಮಾನ, ಮಣ್ಣು ಮತ್ತಿತರ ಸೂಚ್ಯಂಕಗಳನ್ನು ತಿಳಿಸುತ್ತದೆ.

ರೈತರ ಪ್ರಗತಿಯನ್ನು ಪರಿಣಾಮಕಾರಿಯಾಗಿ ದಾಖಲಿಸಿ ನಿರ್ವಹಿಸಲು ಸೂಕ್ತ ತಂತ್ರಾಂಶದ ಅಗತ್ಯವಿದೆ. ಇದರಿಂದ ಭಾಗಿದಾರರಿಗೆ ಎಲ್ಲ ಮಾಹಿತಿಗಳು ಸಿಗುತ್ತವೆ. ಕ್ರಾಪ್‌ಇನ್‌ನವರ ಸ್ಮಾರ್ಟ್ ಫಾರಂ ಕೃಷಿ ನಿರ್ವಹಣೆಗೆ ಪರಿಹಾರವನ್ನು ಒದಗಿಸುತ್ತದೆ. ಇದು ರೈತರ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಜೊತೆಯಾಗಿದ್ದು ಹಂತಹಂತವಾಗಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ.

ಕ್ರಾಪ್‌ಇನ್ ತಂತ್ರಜ್ಞಾನವು ಋತುಮಾನಕ್ಕೆ ಅನುಗುಣವಾಗಿ ಬೆಳೆಯಲಾಗುವ ಮುಖ್ಯ ಬೆಳೆಗಳ ಕುರಿತು ಹವಾಮಾನವನ್ನು ಆಧರಿಸಿ ರೈತರಿಗೆ ಸ್ಥಳೀಯ ಹಿಂದಿ ಭಾಷೆಯಲ್ಲಿಯೇ ಸುಸ್ಥಿರ ಕೃಷಿ ಪದ್ಧತಿಯಂತೆ ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡುತ್ತದೆ. ರೈತರ ಚಟುವಟಿಕೆಗಳನ್ನು ದಾಖಲಿಸುವುದು ಅಷ್ಟು ಸುಲಭವಾಗಿರಲಿಲ್ಲ. ಸುಲಭ ಮೊಬೈಲ್ ಅಪ್ಲಿಕೇಶನ್‌ನಿಂದ ಕ್ಷೇತ್ರದ ಕೆಲಸಗಾರರು ಉತ್ತಮ ಕ್ಷಮತೆ, ಪಾರದರ್ಶಕತೆಯೊಂದಿಗೆ ಈ ಮಾಹಿತಿಯನ್ನು ದಾಖಲಿಸಿದರು. ಇದರಿಂದ ಭಾಗಿದಾರರಿಗೆ ಕೀಟ ಇಲ್ಲವೆ ರೋಗಬಾಧೆಯ ಕುರಿತು ಸಮಯಕ್ಕೆ ಸರಿಯಾಗಿ ಎಚ್ಚರಿಕೆ ನೀಡಬಹುದು.

ವೆಬ್ ಮತ್ತು ಮೊಬೈಲ್ ಆಧಾರಿತ ಸಲಹಾ ಡ್ಯಾಶ್‌ಬೋರ್ಡ್‌ನ್ನು ಅಭಿವೃದ್ಧಿಪಡಿಸಲಾಯಿತು. ಇದು ಹಳ್ಳಿಯ ಸಂಪನ್ಮೂಲ ವೃತ್ತಿಪರರಿಗೆ ಬಿತ್ತನೆ, ಮಣ್ಣಿನ ಆರೋಗ್ಯ, ಬೀಜೋಪಚಾರ, ಗೊಬ್ಬರ ಮತ್ತು ಏಳು ದಿನಗಳ ಹವಾಮಾನ ವರದಿಯನ್ನು ಒದಗಿಸುತ್ತದೆ. ಹವಾಮಾನ ಕುರಿತು ಇರುವ ಅತ್ಯುತ್ತಮ ಮಾದರಿಗಳನ್ನು ಆಧರಿಸಿ ವರದಿ ನೀಡಲಾಗುತ್ತದೆ. ಈ ಮಾಹಿತಿಗಳು ಭಾಗಿದಾರ ರೈತರಿಗೆ ತಮ್ಮ ಬೆಳೆಯ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯಮಾಡುತ್ತದೆ. ಈ ಮಾಡ್ಯೂಲ್ ರಾಜ್ಯದ ಸಂಶೋಧನ ಸಂಸ್ಥೆಗಳಲ್ಲಿನ ಕೃಷಿ ಪರಿಣತರ ತಾಂತ್ರಿಕ ಸಲಹೆ ಸೂಚನೆಗಳನ್ನು ಹಾಗೂ ಹಳ್ಳಿಯ ಸಂಪನ್ಮೂಲ ವೃತ್ತಿಪರರಿಂದ ಮಾಹಿತಿಗಳನ್ನು ಸೂಕ್ತ ಸಮಯದಲ್ಲಿ ತೆಗೆದುಕೊಂಡು ಪ್ರಾಯೋಗಿಕವಾಗಿ ಕೃಷಿ ಸಲಹೆಗಳನ್ನು ಅಭಿವೃದ್ಧಿ ಪಡಿಸುತ್ತದೆ.

ಕ್ರಾಪ್‌ಇನ್‌ನವರ ತಂತ್ರಜ್ಞಾನದಿಂದ ಹಳ್ಳಿಯ ಸಂಪನ್ಮೂಲ ವೃತ್ತಿಪರ ಬಿಹಾರದಿಂದ ಬಿತ್ತನೆ, ಮಣ್ಣಿನ ಆರೋಗ್ಯ, ಬೀಜೋಪಚಾರ, ಹವಾಮಾನ ಮುನ್ಸೂಚನೆಯ ಕುರಿತ ರೈತರಿಗೆ ಅನುಕೂಲವಾಗುವ ಮಾಹಿತಿಗಳನ್ನು ಪಡೆಯಲು ಸಾಧ್ಯವಾಯಿತು. ಇವುಗಳನ್ನು ರೈತರು ತಮ್ಮ ಹೊಲದಲ್ಲಿ ಬಳಸಿಕೊಳ್ಳುವ ಕುರಿತು ಮಾಹಿತಿ ನೀಡಿದರು. ಕ್ರಾಪ್‌ಇನ್ ವೃತ್ತಿಪರರೊಂದಿಗೆ ಸಂವಾದ ಮಾಡಲು ಶುರುಮಾಡಿದರು. ಇದರಿಂದ ಅವರು ಅತ್ಯುತ್ತಮ ತರಬೇತುದಾರರಾದರು.

## ಸವಾಲುಗಳು

ಡಿಜಿಟಲ್ ಸೊಲ್ಯೂಶನ್ಸ್‌ಗಳನ್ನು ಪ್ರಚುರಪಡಿಸಲು ಹಲವಾರು ಸವಾಲುಗಳಿವೆ. ಮೊದಲನೆಯದು ಇದರ ಅಳವಡಿಕೆ. ಅದರಲ್ಲೂ ಭಾರತದಲ್ಲಿ ಬಹುತೇಕ ಕೃಷಿ ಉದ್ಯಮಿಗಳು ಸಾಂಪ್ರದಾಯಿಕ ಪದ್ಧತಿಗಳಿಗನುಸಾರವಾಗಿ ಕೆಲಸ ಮಾಡುತ್ತಿರುತ್ತಾರೆ. ಅವರು ಡಿಜಿಟಲೀಕರಣವನ್ನು ಅನುಮಾನದಿಂದಲೇ ನೋಡುತ್ತಾರೆ. ಅಪ್ಲಿಕೇಶನ್‌ನ ಮೂಲಕ ಕೇವಲ ಅವರನ್ನು ಹಾಗೂ ಅವರ ಕೆಲಸವನ್ನು ಗುರುತಿಸಿ ಮೌಲ್ಯಮಾಪನ ಮಾಡಲಾಗುತ್ತದೆ. ಇದು ಅವರಿಗೆ ಇನ್ನಷ್ಟು ಸವಾಲುಗಳನ್ನು ಒಡ್ಡುವ ಮೂಲಕ ಅವರ ಗಮನ ಬೇರೆಡೆಗೆ ಹೋಗುವಂತೆ ಮಾಡುತ್ತದೆ ಎನ್ನುವ ತಪ್ಪುತಿಳುವಳಿಕೆ ಇದೆ.

ಎರಡನೆಯದು ಚಲನಶೀಲತೆ ಮತ್ತು ಸಾಕ್ಷರತೆ. ಮೊಬೈಲ್ ಸಂವಹನ ಮತ್ತು ಬ್ರಾಡ್ಬ್ಯಾಂಡ್ ಸಂಪರ್ಕ ಚೆನ್ನಾಗಿದ್ದರೂ ಕೂಡ ಗ್ರಾಮೀಣ ಭಾಗಗಳಲ್ಲಿ ಇದು ಅಷ್ಟು ಪರಿಣಾಮಕಾರಿಯಾಗಿಲ್ಲ. ಈ ವಿಷಯವಾಗಿ ಗ್ರಾಮೀಣ ಭಾಗದಲ್ಲಿ ಸಾಕ್ಷರತೆಯ ಅವಶ್ಯಕತೆಯಿದೆ. ತಂತ್ರಜ್ಞಾನವು ಬದಲಾಗುತ್ತಲೇ ಇರುತ್ತದೆ. ಕಂಪನಿಗಳು ಈ ಕುರಿತು ಸದಾ ಸನ್ನದ್ಧರಾಗಿರಬೇಕು. ಹೊಸ ತಂತ್ರಜ್ಞಾನದ ಅಳವಡಿಕೆಗೆ ಸನ್ನದ್ಧವಾಗಿರುವುದು ಸಮಯ ಮತ್ತು ವೆಚ್ಚ ಎರಡನ್ನೂ ಬೇಡುತ್ತದೆ.

## ಜವಾಬ್ದಾರಿಗಳ ಹಂಚಿಕೆ



1. ಕ್ರಾಪ್‌ಇನ್‌ನ ತಂತ್ರಜ್ಞಾನ ತಂಡ ಮತ್ತು ವಿಷಯ ಪರಿಣಿತರು ತರಬೇತಿ ಕಾರ್ಯಕ್ರಮ ಅಭಿವೃದ್ಧಿಗೊಳಿಸಲು ಅಗತ್ಯವಾದ ಪರಿಣಿತಿ, ಅನುಭವ, ಸಂಪನ್ಮೂಲವನ್ನು ಒದಗಿಸುತ್ತಾರೆ.
2. ಕ್ರಾಪ್‌ಇನ್‌ನ ಘಟಕದ ಸಹ ನಿರ್ದೇಶನಗಳು ಸ್ಥಳೀಯ ಪರಿಸ್ಥಿತಿಗಳಿಗನುಗುಣವಾಗಿ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳುತ್ತಾರೆ. VRP's YP's ಮತ್ತು ರೈತರಿಗೆ ತರಬೇತಿ ಚಟುವಟಿಕೆಗಳ ನಿರ್ವಹಣೆ ಮಾಡುತ್ತಾರೆ.
3. ಹಳ್ಳಿಯ ಸಂಪನ್ಮೂಲ ವ್ಯಕ್ತಿಗಳು ರೈತರು ಮತ್ತವರ ಕುಟುಂಬದವರಿಗೆ ಶಿಕ್ಷಣ ಹಾಗೂ ತರಬೇತಿಯನ್ನು ನೀಡುತ್ತಾರೆ. ರೈತರಿಗೆ ಒಳಸುರಿಯುವಿಕೆಗಳನ್ನು ಪೂರೈಸುವವರು ತರಬೇತಿಯಲ್ಲಿ ಭಾಗವಹಿಸಿ ಗ್ರಾಹಕರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ.
4. ರೈತರು ತರಬೇತಿಯನ್ನು ಪಡೆಯುತ್ತಾರೆ. ತಾವು ಕಲಿತದ್ದನ್ನು ತಮ್ಮ ಜಮೀನಿನಲ್ಲಿ ಅನುಷ್ಠಾನಗೊಳಿಸುತ್ತಾರೆ.

### ಚೌಕ 1: ಕ್ರಾಪ್‌ಇನ್ ಡಿಜಿಟಲ್ ಸೊಲ್ಯೂಶನ್ಸ್

**ಸ್ಮಾರ್ಟ್ ಫಾರಂ :** ಕೃಷಿ ನಿರ್ವಹಣೆಯಲ್ಲಿ ಇದಕ್ಕೆ ಬಹುಮಾನ ಸಂದಿದೆ. ಇದು ಕೃಷಿಯನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸಿದೆ. ಮಾಹಿತಿಯನ್ನಾಧರಿಸಿ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆಯನ್ನು ಬಲಪಡಿಸಿದೆ. ಪ್ರಕ್ರಿಯೆ, ಜನ ಹಾಗೂ ಕ್ಷೇತ್ರ ಪ್ರದರ್ಶನ ಕುರಿತು ಮಾಹಿತಿ ಒದಗಿಸುತ್ತದೆ. ಮಾಹಿತಿಯನ್ನು ಅನುಸರಿಸುವ ಜೊತೆಗೆ ಅದರ ಫಲಿತಾಂಶವನ್ನು ಊಹಿಸುತ್ತದೆ. ಪದ್ಧತಿಗಳು, ಸಮಸ್ಯೆಗಳು, ಪ್ರಮಾಣೀಕರಣ, ಕೀಟ ಮತ್ತು ಬೆಳೆ ಆರೋಗ್ಯ ನಿರ್ವಹಣೆ ಇವೆಲ್ಲವನ್ನೂ ಇದು ಒಳಗೊಂಡಿದೆ.

**ಸ್ಮಾರ್ಟ್‌ರಿಸ್ಕ್:** ಇದೊಂದು ಕೃಷಿ ವ್ಯವಹಾರಕ್ಕೆ ಸಂಬಂಧಿಸಿದ ಇಂಟೆಲಿಜೆನ್ಸ್ ಸೊಲ್ಯೂಶನ್. ಆಪತ್ತಿನ ಮುನ್ಸೂಚನೆ ಹಾಗೂ ಅದರ ನಿರ್ವಹಣೆಯ ಕುರಿತು ಮಾಹಿತಿ ನೀಡುತ್ತದೆ. ಇದರಿಂದ ಸಾಲ ಪಾವತಿ ಹಾಗೂ ಸಾಲ ನಿರ್ವಹಣೆಯ ಕುರಿತು ಸಹಾಯ ಪಡೆಯಬಹುದು. ಉಪಗ್ರಹದ ಮಾಹಿತಿಯನ್ನಾಧರಿಸಿದ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಇವುಗಳನ್ನು ಸ್ಥಳೀಯ ಮಟ್ಟದ ಹವಾಮಾನ ಮಾಹಿತಿ ನೀಡಲು ಬಳಸಲಾಗುತ್ತದೆ.

**ಎಂವೇರ್‌ಹೌಸ್:** ಪ್ಯಾಕಿಂಗ್, ಸಂಸ್ಕರಣೆ ಮತ್ತು ರಫ್ತು ಕಂಪನಿಗಳಿಗೆ ನೆರವಾಗುತ್ತದೆ. ತೋಟದಿಂದ ತಟ್ಟೆಗೆ ಆಹಾರವನ್ನು ತಲುಪಿಸಲು, ಗುಣಮಟ್ಟ ನಿಯಂತ್ರಣ ಮತ್ತು ನಿರ್ವಹಣೆಗೆ ನೆರವಾಗುತ್ತದೆ.

**ಸ್ಮಾರ್ಟ್‌ಸೇಲ್ಸ್:** ಮಾರಾಟದ ಸಾಧ್ಯತೆಗಳನ್ನು ಊಹಿಸಿ ಮಾರಾಟವನ್ನು ಉತ್ತಮಗೊಳಿಸಲು, ಮಾರಾಟ ತಂಡದ ನಿರ್ವಹಣೆ ಮಾಡಲು ಇದು ನೆರವು ನೀಡುತ್ತದೆ.

**ಎಕರ್‌ಸ್ಕ್ವೇರ್ :** ಇದೊಂದು ವಿಶಿಷ್ಟ ರೈತರ ಅಪ್ಲಿಕೇಶನ್. ಇದರ ನೆರವಿನಿಂದ ಕಂಪನಿಗಳವರು ನೇರವಾಗಿ ರೈತರೊಂದಿಗೆ ಸಂವಾದ ನಡೆಸಿ, ವಿಷಯವನ್ನು ಹಂಚಿಕೊಳ್ಳಬಹುದು, ಅವರಿಗೆ ಶಿಕ್ಷಣ ನೀಡಬಹುದು ಮತ್ತು ಸಮಾಲೋಚನೆ ಕೂಡ ನಡೆಸಬಹುದು. ಇದರಿಂದಾಗಿ ಕಂಪನಿಗಳವರು ತಂತ್ರಜ್ಞಾನದ ನೆರವನ್ನು ರೈತರೊಂದಿಗೆ ಹಂಚಿಕೊಳ್ಳುವುದರ ಮೂಲಕ ಅವರ ವಿಶ್ವಾಸಾರ್ಹತೆ ಗಳಿಸಿಕೊಳ್ಳಬಹುದು.

ಈ ಸವಾಲುಗಳು ಅಗ್ರಿಟೆಕ್ ಕಂಪನಿಗಳು ರೈತರೊಂದಿಗೆ ನೇರವಾಗಿ ಕೆಲಸ ಮಾಡಲು ಅಡ್ಡಿಮಾಡುತ್ತವೆ. ಕ್ರಾಪ್‌ಇನ್ ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದೆ. ಇದು ಪರಿಸ್ಥಿತಿಯನ್ನು ಹಿಂದೆಗಿಂತಲೂ ಸುಧಾರಿಸಿದೆ.

### ಪರಿಣಾಮಗಳು

ರೈತರೀಗ ಹೆಚ್ಚು ತಂತ್ರಜ್ಞಾನ ಸ್ನೇಹಿಗಳಾಗಿದ್ದು ಕೃಷಿಯ ಡಿಜಿಟಲೀಕರಣದಿಂದ ತಮ್ಮ ದೃಷ್ಟಿಕೋನವನ್ನು ವಿಸ್ತರಿಸಿಕೊಂಡಿದ್ದಾರೆ. ಇಳುವರಿಯ ಹೆಚ್ಚಳ, ಕೃಷಿಯಲ್ಲಿ ಹೆಚ್ಚಿದ ಕ್ಷಮತೆಯನ್ನು ನೋಡಿ ಅವರಿಗೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅನುಕೂಲದ ಅರಿವಾಗಿದೆ. ಕ್ರಾಪ್‌ಇನ್ 2.1 ಮಿಲಿಯನ್ ರೈತರ ಬದುಕನ್ನು ಪ್ರಭಾವಿಸಿದೆ. 52 ದೇಶಗಳ ಸುಮಾರು 6.1 ಮಿಲಿಯನ್ ಎಕರೆ ಭೂಮಿಯ ವಿವರಗಳನ್ನು ಡಿಜಿಟಲೈಸ್ ಮಾಡಲಾಗಿದೆ. ಕ್ರಾಪ್‌ಇನ್ ಸೊಲ್ಯೂಶನ್‌ನವರು 9,400+ ಬೆಳೆಗಳನ್ನು ಗುರುತಿಸಿದ್ದಾರೆ. ಜೊತೆಗೆ 388ಕ್ಕೂ ಹೆಚ್ಚು ಬೆಳೆಗಳ ಮೇಲೆ ಇನ್ನೂ ಕೆಲಸ ನಡೆಯುತ್ತದೆ.

ಕ್ರಾಪ್‌ಇನ್ ಸೊಲ್ಯೂಶನ್ಸ್ ರೈತರಿಗೆ ಜ್ಞಾನಭಂಡಾರವಿದ್ದಂತೆ ತಮ್ಮ ಕೃಷಿಭೂಮಿಯ ಕುರಿತ ವಿವರಗಳು, ಹವಾಮಾನ ಮುನ್ಸೂಚನೆಗಳು ಮತ್ತು ಕೀಟಹಾವಳಿಯ ಕುರಿತು ಅವರಿಗೆ ಒಳನೋಟಗಳನ್ನು ಒದಗಿಸುತ್ತದೆ. ಇದು ರೈತರ ಕೌಶಲ್ಯಾಭಿವೃದ್ಧಿಗೆ ನೆರವಾಗಿ ಅವರ ಭವಿಷ್ಯನ್ನು ರೂಪಿಸಿಕೊಳ್ಳಲು ಸಹಾಯವಾಡುತ್ತದೆ. ಕ್ಷೇತ್ರದ ಏಜೆಂಟ್‌ಗಳು ರೈತರಿಗೆ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬೇಕೆಂದು ತರಬೇತಿ ನೀಡುತ್ತಾರೆ.

ಕೃಷಿಯ ಡಿಜಿಟಲೀಕರಣವು ಭವಿಷ್ಯ ಮಾತ್ರವಲ್ಲ ಅದು ಇಂದಿನ ಜಾಗತಿಕ ಕೃಷಿಯ ವಾಸ್ತವವಾಗಿದೆ. ಡಿಜಿಟಲ್ ತಂತ್ರಜ್ಞಾನಗಳು ಜಾಗತಿಕ ಕೃಷಿಯ ಸಾಮರ್ಥ್ಯವೃದ್ಧಿಗೆ ಪ್ರಮುಖ ಪೂರಕಾಂಶವಾಗಿದೆ. ಡಿಜಿಟಲೀಕರಣವು ಕೃಷಿಯಲ್ಲಿ ಅದ್ಭುತಗಳನ್ನು ಮಾಡಿದೆ. ಆಹಾರ ಉತ್ಪಾದನೆ ಹಾಗೂ ರೈತರ ಬದುಕಿನ ಮೇಲೆ ಇತ್ಯಾತ್ಮಕ ಪರಿಣಾಮ ಬೀರಿದೆ. ಡಿಜಿಟಲ್ ಕೃಷಿಯೆಂದರೆ ಮಾಹಿತಿ ಆಧರಿಸಿ ನಿರ್ಣಯ ಕೈಗೊಳ್ಳುವಿಕೆ, ಇಳುವರಿ ಹೆಚ್ಚಳ, ಉತ್ತಮ ಗುಣಮಟ್ಟದ ಉತ್ಪಾದನೆ. ನಂಬಿಕಾರ್ಹವಾದ, ನಿಖರವಾದ ಮತ್ತು ಸುಸ್ಥಿರ ವ್ಯವಸ್ಥೆಯನ್ನು ಒದಗಿಸುವ ಮೂಲಕ ಇದನ್ನು ಸಾಧ್ಯವಾಗಿಸುವುದು ಆಧುನಿಕ ತಂತ್ರಜ್ಞಾನ. ಇದು ಬರಲಿರುವ ನಾಳೆಯನ್ನು ಉತ್ತಮಗೊಳಿಸುತ್ತದೆ.

◆

**Krishna Kumar**
CEO and Founder, CropIn.
3rd Floor, 1021, 16th Main Rd,
Tavarekere, Aicobo Nagar, 1st Stage,
BTM Layout 1, Bengaluru, Karnataka-560029

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 2, ಜೂನ್ 2020.

# ಕುಟುಂಬ ಕೈ ತೋಟಗಳು

**ಗ್ರೀನ್ ಫೌಂಡೇಶನ್**

**'ಕುಟುಂಬ ಕೈ ತೋಟ'ಗಳನ್ನು ಕರ್ನಾಟಕದಲ್ಲಿ ಯಶಸ್ವಿಯಾಗಿ ಪ್ರಚುರಪಡಿಸಲಾಗಿದೆ. ಕುಟುಂಬಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲು ಹಾಗೂ ಆದಾಯ ಗಳಿಸಲು ಇದೊಂದು ದಾರಿಯಾಗಿದೆ.**

ಉತ್ತಮಗುಣಮಟ್ಟ ಹಾಗೂ ಸುರಕ್ಷಿತ ಆಹಾರದ ಬಗೆಗೆ ಹೆಚ್ಚುತ್ತಿರುವ ಅರಿವಿನಿಂದಾಗಿ ಈ ತರಕಾರಿಗಳ ತಾಜಾತನ, ಸ್ವಚ್ಛತೆ ಮತ್ತು ಪೌಷ್ಟಿಕಾಂಶದ ಕಾರಣದಿಂದ ಗ್ರಾಹಕರ ಗಮನಸೆಳೆಯುತ್ತಿದೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿನ ರೈತರು, ಉದ್ಯಮಿಗಳು ಹಾಗೂ ಹವ್ಯಾಸಿ ಕೃಷಿಕರು ತರಕಾರಿ ಕೃಷಿಯನ್ನು ಕೈಗೊಳ್ಳುತ್ತಿದ್ದಾರೆ. ತರಕಾರಿ ಕೃಷಿಯು ಇಂದು ಹಿತ್ತಿಲುಗಳಲ್ಲಿ, ನಗರ ಪ್ರದೇಶಗಳಲ್ಲಿ ತಾರಸಿಗಳಲ್ಲಿ ಜಾಗ ಕಂಡುಕೊಳ್ಳುತ್ತಿದೆ. ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳಿಂದ ಮುಕ್ತವಾದ ಸಾವಯುವ ತರಕಾರಿಗಳನ್ನು ತಾವೇ ಬೆಳೆದುಕೊಳ್ಳಬಯಸುತ್ತಿದ್ದಾರೆ.

ಗ್ರೀನ್ ಫೌಂಡೇಶನ್ ಎನ್ನುವ ಎನ್‌ಜಿಒ ಕರ್ನಾಟಕದ ಕನಕಪುರ ತಾಲ್ಲೂಕಿನಲ್ಲಿ ರೈತರೊಂದಿಗೆ ಕೆಲಸ ಮಾಡುತ್ತಿದ್ದಾರೆ. ಬಹಳಷ್ಟು ರೈತರ ಬಳಿ ಒಂದು ಇಲ್ಲವೆ ಎರಡು ಎಕರೆ ಭೂಮಿಯಿದ್ದು ಅವರು ಏಕಬೆಳೆಪದ್ಧತಿ ಅನುಸರಿಸುತ್ತಿದ್ದಾರೆ. ರೈತರು ಕೃಷಿಗೆ ಮಳೆಯನ್ನೇ ಅವಲಂಭಿಸಿದ್ದು ವಾರ್ಷಿಕವಾಗಿ ರೂ. 30000 ಗಳಿಸುತ್ತಿದ್ದಾರೆ. ಕೃಷಿ ಕೆಲಸಗಳು ಇಲ್ಲದಿರುವ ಸಮಯದಲ್ಲಿ ರೈತರು ಹತ್ತಿರದ ಹಳ್ಳಿಗಳು ಇಲ್ಲವೇ ಬೇರೆ ರಾಜ್ಯಗಳಿಗೆ ಕೃಷಿ ಸಂಬಂಧಿತ ಇಲ್ಲವೇ ಬೇರೆ ರೀತಿಯ ಕೆಲಸಗಳಿಗೆ ಕೂಲಿಗಾಗಿ ಹೋಗುತ್ತಾರೆ.

ಗ್ರೀನ್ ಫೌಂಡೇಶನ್‌ನವರು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ವೈದ್ಯಕೀಯ ಕ್ಯಾಂಪುಗಳನ್ನು ಆಯೋಜಿಸಿ ಆರೋಗ್ಯ ಪರೀಕ್ಷೆ ನಡೆಸಿ ಜನರ ಆರೋಗ್ಯದ ಬಗ್ಗೆ ನಿಗಾವಹಿಸುತ್ತಾರೆ. ಪೌಷ್ಟಿಕಾಂಶ ಕೊರತೆಯಿಂದ ಹಲವಾರು ಕಾಯಿಲೆಗಳು ಇರುವುದು ಈ ಕ್ಯಾಂಪುಗಳಿಂದ ತಿಳಿದುಬಂದಿದೆ. ಕುಟುಂಬಗಳು ಪ್ರತಿತಿಂಗಳು ಸರಿಸುಮಾರು ರೂ.400 ತರಕಾರಿಗಳಿಗಾಗಿ ಖರ್ಚುಮಾಡುತ್ತಾರೆ. ಕೃಷಿಯಲ್ಲಿನ ಅನಿಶ್ಚತತೆ ಅದರಿಂದ ಗಳಿಸುವ ಅಲ್ಪ ಆದಾಯ ಇವುಗಳಿಂದ ತರಕಾರಿಗಳಂತಹ ಪೌಷ್ಟಿಕಾಂಶಯುಕ್ತ ಆಹಾರ ಕೊಳ್ಳುವುದು ಕಷ್ಟ. ಆದ್ದರಿಂದ ಈ ಕುಟುಂಬಗಳು ಪೌಷ್ಟಿಕಾಂಶ ಕೊರತೆಯನ್ನು ಎದುರಿಸುತ್ತವೆ.

ಈ ಪರಿಸ್ಥಿತಿಯಿಂದಾಗಿಯೇ ಗ್ರೀನ್ ಫೌಂಡೇಶನ್ನವರು ರೈತ ಕುಟುಂಬಗಳು 'ಕುಟುಂಬ ಕೈತೋಟ'ಗಳಿಂದ ಪೌಷ್ಟಿಕಾಂಶಯುಕ್ತ ಆಹಾರ ಹಾಗೂ ಆದಾಯ ಗಳಿಸಲು ನೆರವು ನೀಡಿದವು.

**ಕೈತೋಟಗಳು ಕೇವಲ ಪೌಷ್ಟಿಕಾಂಶದ ಮೂಲವಲ್ಲ ಅವು ಆದಾಯ ಗಳಿಕೆಯ ದಾರಿಗಳೂ ಕೂಡ.**

## ಸಾಮರ್ಥ್ಯ ವೃದ್ಧಿ

ಕ್ಷೇತ್ರ ಸಿಬ್ಬಂದಿ ವರ್ಗದವರು ಹಿತ್ತಲಲ್ಲಿ ತರಕಾರಿ ಬೆಳೆಯಲು ಜಾಗವಿರುವ ಕುಟುಂಬಗಳನ್ನು ಗುರುತಿಸಿದರು. ಆ ಕುಟುಂಬಗಳ ಮಹಿಳೆಯರಿಗೆ ಕೈತೋಟದ ಪೌಷ್ಟಿಕಾಂಶ ಮತ್ತು ಆರ್ಥಿಕ ಲಾಭಗಳ ಕುರಿತು ಮನದಟ್ಟು ಮಾಡಿಸಿದರು. ಮಹಿಳೆಯರು ಬೀಜಗಳನ್ನು ಸಂರಕ್ಷಿಸುವಲ್ಲಿ ತರಕಾರಿ ಬೆಳೆಯುವುದರಲ್ಲಿ ಎಂದಿಗೂ ಮುಂಚುಣಿಯಲ್ಲಿದ್ದಾರೆ. ಮಹಿಳೆಯರಿಗೆ ತಮ್ಮ ಮನೆಯ ಹಿತ್ತಲಲ್ಲಿ ಸಾವಯವ ವಿಧಾನದಲ್ಲಿ ತರಕಾರಿಗಳನ್ನು ಬೆಳೆಸಲು ತರಬೇತಿ ನೀಡಲಾಯಿತು. ದೇಸಿ ಬೀಜಗಳನ್ನು ಪ್ರಚುರಪಡಿಸಲಾಯಿತು. ರೈತರಿಗೆ ರೋಗ ಹಾಗೂ ಕೀಟಬಾಧೆಗಳಿಂದ ಮುಕ್ತವಾದ ಈ ಬೀಜಗಳ ಪ್ರಾಮುಖ್ಯತೆಯನ್ನು ತಿಳಿಸಿಕೊಡಲಾಯಿತು.

ಸಿಬ್ಬಂದಿಗಳು ಕುಟುಂಬಗಳ ಭೂಮಿಯನ್ನಾಧರಿಸಿ ಬದುಗಳಲ್ಲಿ ಕೃಷಿ ವಿಧಾನ, ಪರ್ಮಾಕಲ್ಚರ್ ಮತ್ತು ಬೇಸಿನ್ ವಿಧಾನಗಳನ್ನು ಅನುಸರಿಸಲು ಹೇಳುತ್ತಾರೆ. ರೈತರಿಗೆ 22 ಬಗೆಯ ತರಕಾರಿ ಬೀಜಗಳ ಆಯ್ಕೆಯನ್ನು ನೀಡಲಾಗಿತ್ತು. ಸಿಬ್ಬಂದಿ ವರ್ಗದವರು ಆಯಾ ಕುಟುಂಬಗಳಿಗೆ ಹೊಂದುವಂತೆ ಅಂದರೆ ಅವರಿಗಿರುವ ಜಾಗ, ಮಣ್ಣು, ಕೀಟಬಾಧೆ ಮತ್ತಿತರ ಅಂಶಗಳನ್ನು ಗಮನಿಸಿ ಸಲಹೆಗಳನ್ನು ನೀಡಿದರು. ಕೆಲವು ರೈತರು ತಮ್ಮ ಹಿತ್ತಲಲ್ಲಿ ಹತ್ತು ತರಹದ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಮಹಿಳಾ ಕೃಷಿಕರು ಈ ಕೈತೋಟಗಳನ್ನು ಮಾಡುತ್ತಿದ್ದಾರೆ. ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಸೊಪ್ಪು, ಕ್ಯಾರೆಟ್, ಹುರುಳಿಕಾಯಿ, ಮೂಲಂಗಿ, ಟೊಮೊಟೊ, ಸೌತೆಕಾಯಿ, ಸೋರೆಕಾಯಿ, ಹೀರೆಕಾಯಿ ಮತ್ತು ಹಾಗಲ ಕಾಯಿಗಳನ್ನು ಹಿತ್ತಲಲ್ಲಿ ಬೆಳೆಯುತ್ತಿದ್ದಾರೆ. ಆರೋಗ್ಯದ ಹಿತದೃಷ್ಟಿಯಿಂದ ನುಗ್ಗೆಕಾಯಿ ಮತ್ತು ಕರಬೇವನ್ನು ಇತರ ತರಕಾರಿಗಳೊಂದಿಗೆ ಬೆಳೆಯಲು ಹೇಳಲಾಗುತ್ತದೆ. ತಮ್ಮ ಪೌಷ್ಟಿಕಾಂಶದ ಗುಣಗಳಿಂದ ಇವು ರಕ್ತಹೀನತೆ, ಸಕ್ಕರೆ ಕಾಯಿಲೆ, ರಕ್ತದೊತ್ತಡ ಇತ್ಯಾದಿ ಕಾಯಿಲೆಗಳನ್ನು ತಡೆಯಬಲ್ಲದು.

ರೈತರಿಗೆ ಜೈವಿಕ ಒಳಸುರಿಯುವಿಕೆಗಳನ್ನು ತಯಾರಿಸುವುದನ್ನು ಕೂಡ ಹೇಳಿಕೊಡಲಾಗಿದೆ. ಹಾಗಾಗಿ ದುಬಾರಿ ಅಜೈವಿಕ ಒಳಸುರಿಯುವಿಕೆಗಳಿಗಾಗಿ ಖರ್ಚುಮಾಡುವ ಅವಶ್ಯಕತೆಯಿಲ್ಲ. ಈ ಜೈವಿಕ ಒಳಸುರಿಯುವಿಕೆಗಳು ಹೊಲಗೊಬ್ಬರ, ದ್ರವ ಜೀವಾಮೃತ, ಪೂಚಿಮರಂದು, ಪಂಚಗವ್ಯ, ಮೆಣಸಿನಕಾಯಿ ಬೆಳ್ಳುಳ್ಳಿ ಡಿಕಾಕ್ಷನ್, ನಿಂಬೆ ಕಷಾಯ, ಘನ ಜೀವಾಮೃತ ಇತ್ಯಾದಿಗಳನ್ನು ಒಳಗೊಂಡಿದೆ. ಜೈವಿಕ ಒಳಸುರಿಯುವಿಕೆಗಳನ್ನು ಜನಾಧ್ಯಯನ ಫಾರ್ಮರ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ (JFPCL) ಇಂದ ಕೊಳ್ಳಬಹುದು. ಇದನ್ನು ಕೃಷಿ ಸಮುದಾಯದ ಸದಸ್ಯರ ಸಹಯೋಗದೊಂದಿಗೆ



ಕೈತೋಟಗಳು ಹಲವು ವಿಧದ ತರಕಾರಿಗಳನ್ನು ಒದಗಿಸುತ್ತವೆ

ಸ್ಥಾಪಿಸಲಾಗಿದೆ. ಅವರೆಲ್ಲರೂ ಕೃಷಿಪರಿಸರವೈವಿಧ್ಯವನ್ನು ಕಾಪಾಡಲು, ಕೃಷಿಕರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು, ಸಾವಯವ ಕೃಷಿಯನ್ನು ಪ್ರಚುರಪಡಿಸಲು ಮತ್ತಿತರ ವಿಷಯಗಳ ಕುರಿತು ಒಟ್ಟಾಗಿ ಕೆಲಸಮಾಡುತ್ತಿದ್ದಾರೆ.

ಆಸಕ್ತ ರೈತರಿಗೆ ಬೀಜಗಳ ಉತ್ಪಾದನೆ ಕುರಿತು ತರಬೇತಿ ನೀಡಲಾಗುತ್ತದೆ. ಮುಂದಿನ ಬಾರಿ ಬಿತ್ತನೆಗೆ ಇಟ್ಟುಕೊಂಡು ಉಳಿದ ಬೀಜಗಳನ್ನು JFPCLನಲ್ಲಿ ಮಾರಾಟ ಮಾಡಲಾಗುತ್ತದೆ. ಇದು ರೈತರಿಗೆ ಹೆಚ್ಚುವರಿ ಆದಾಯವನ್ನು ತಂದುಕೊಡುತ್ತದೆ.

ಗ್ರೀನ್ ಫೌಂಡೇಶನ್‌ನವರು ಕನಕಪುರ ಜಿಲ್ಲೆಯ ರಾಮನಗರ ಜಿಲ್ಲೆಯ 160 ಕೃಷಿಕುಟುಂಬಗಳಿಗೆ ಕೈತೋಟಗಳನ್ನು ಮಾಡಲು ನೆರವು ನೀಡಿದೆ.

ತಾಯಿಮುದ್ದಮ್ಮನ ಕುಟುಂಬದಲ್ಲಿ ನಾಲ್ಕು ಮಂದಿ ಇದ್ದಾರೆ. ಮಾರಸಾರಹಳ್ಳಿಯ ಆಕೆಯ ಮನೆಯ ಹಿತ್ತಲಲ್ಲಿ ಆಕೆ ಕೈತೋಟ ಮಾಡುವವರೆಗೂ ಖಾಲಿಯಾಗೇ ಇತ್ತು. ಕೈತೋಟದ ನಿರ್ವಹಣೆ ಹಾಗೂ ಯಾವ ತರಕಾರಿಗಳನ್ನು ಬೆಳೆಯಬೇಕು ಎನ್ನುವುದರ ಕುರಿತು ಆಕೆಗೆ ತರಬೇತಿ ನೀಡಲಾಯಿತು. ಇಂದು ಆಕೆ ತನ್ನ 2.2 ಸೆಂಟ್ ಭೂಮಿಯಲ್ಲಿ ಪರ್ಮಾಕಲ್ಚರ್ ವಿಧಾನದಲ್ಲಿ 15 ಬಗೆಯ ತರಕಾರಿಗಳನ್ನು ಬೆಳೆಯುತ್ತಿದ್ದಾಳೆ. ಜನಧನ್ಯದವರು ಆಕೆಗೆ ಪಂಚಗವ್ಯ, ವರ್ಮಿವಾಷ್, ಅಗ್ನಿ ಅಸ್ತ್ರಂ ಮತ್ತು ಪೊಂಗಾಮಿಯ ಪುಡಿಯಂತಹ ಜೈವಿಕ ಒಳಸುರಿಯುವಿಕೆಗಳನ್ನು ನೀಡಿದ್ದಾರೆ. ಆಕೆ ಸುಮಾರು 9ಕೆಜಿ ಬದನೆ, 8 ಕೆಜಿ ಹೀರೆಕಾಯಿ, 6 ಕೆಜಿ ಸೋರೆಕಾಯಿ, 13 ಕೆಜಿ ಕುಂಬಳಕಾಯಿ, 25 ಕೆಜಿ ಬೆಂಡೆಕಾಯಿ, 40 ಕೆಜಿ ಟೊಮೆಟೊ ಮತ್ತು 12 ಕೆಜಿ ಮೆಣಸಿನಕಾಯಿ ಬೆಳೆಯುತ್ತಿದ್ದಾಳೆ. ತಮ್ಮ ಮನೆಯ ಅವಶ್ಯಕತೆಗೆ ಸಾಕಾಗುವಷ್ಟು ಇಟ್ಟುಕೊಂಡು ಉಳಿದದ್ದನ್ನು ಆಕೆ ನೆರೆಹೊರೆಯವರಲ್ಲಿ ಹಾಗೂ ಬಂಧುಗಳಲ್ಲಿ ವಿತರಿಸುತ್ತಾಳೆ. ತಾಯಿಮುದ್ದಮ್ಮ ಬೀಜಗಳ ಉತ್ಪಾದನೆಯಲ್ಲೂ ತರಬೇತಿ ಪಡೆದಿದ್ದಾಳೆ.

## ಲಾಭಗಳು

ತಮ್ಮ ಮನೆಯ ಹಿತ್ತಲಲ್ಲಿ ಇರುವ ಜಾಗದಲ್ಲೇ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಹೆಚ್ಚುವರಿ ಆದಾಯ ಗಳಿಸಲು ಮತ್ತು ತಮ್ಮ ಕುಟುಂಬಗಳ ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗಿದೆ. ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಸೊಪ್ಪು, ಕ್ಯಾರೆಟ್, ಹುರಳಿಕಾಯಿ, ಮೂಲಂಗಿ, ಟೊಮೊಟೊ, ಅಮರಂತುಸ್, ಬೆಂಡೆಕಾಯಿ, ಸೌತೆಕಾಯಿ, ಸೋರೆಕಾಯಿ, ಹೀರೆಕಾಯಿ ಮತ್ತು ಹಾಗಲ ಕಾಯಿ ಹೀಗೆ ಕೆಲವು ತರಕಾರಿಗಳನ್ನು ತಮ್ಮ ಕೈತೋಟಗಳಲ್ಲಿ ಬೆಳೆಯುತ್ತಾರೆ.

ಪ್ರತಿ ಕುಟುಂಬದ ಉತ್ಪಾದನೆಯು ಅವರಿಗಿರುವ ಭೂಮಿಯನ್ನಾಧರಿಸಿ ಪ್ರತಿವರ್ಷ 100ರಿಂದ 200 ಕೆಜಿಯಷ್ಟಿರುತ್ತದೆ. ಈ ಉತ್ಪಾದನೆಯು ಮುಖ್ಯವಾಗಿ ಕುಟುಂಬದ ಬಳಕೆಗಾಗಿ ಉಳಿದದ್ದನ್ನು ನೆರೆಹೊರೆಯವರಿಗೆ ಬಂಧುಗಳಿಗೆ ಹಂಚಿ ಹೆಚ್ಚುವರಿಯಾದದ್ದನ್ನು JFPCL ಮೂಲಕ ಇಲ್ಲವೆ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರುತ್ತಾರೆ. ಆದ್ದರಿಂದ ಕೈತೋಟಗಳ ಪೌಷ್ಟಿಕತೆಯ ಸಂಪನ್ಮೂಲ ಮಾತ್ರವಲ್ಲದೆ ಆದಾಯದ ಮೂಲ ಕೂಡ ಹೌದು. ಇದರೊಂದಿಗೆ ಅವರು ಈ ಮೊದಲು ತರಕಾರಿಗಾಗಿ ಖರ್ಚು ಮಾಡುತ್ತಿದ್ದ ರೂ.400 ಉಳಿತಾಯವಾಗುತ್ತದೆ.

ಪೌಷ್ಟಿಕಾಂಶದ ಹೊರತಾಗಿ ಬಡ ಕುಟುಂಬಗಳಿಗೆ ತರಕಾರಿ ಕೃಷಿಯು ಶೀಘ್ರ ಆದಾಯ ತರುವ ಸಂಪನ್ಮೂಲವಾಗಿ ಜನಪ್ರಿಯವಾಗಿದೆ. ಕಾಳುಗಳು ಹಾಗೂ ಹಣ್ಣಿನ ಬೆಳೆಗಳಿಗೆ ಹೋಲಿಸಿದರೆ ತರಕಾರಿಯನ್ನು ಕಡಿಮೆ ಸಮಯದಲ್ಲಿ ಬೆಳೆಯಬಹುದು. ಇವುಗಳಿಗೆ ಬೇಕಾಗುವ ಒಳಸುರಿಯುವಿಕೆಗಳು ಕಡಿಮೆ. ಲೀಸಾ ರೈತರಿಗೆ ಈ ನಿಟ್ಟಿನಲ್ಲಿ ಸಹಾಯ ಮಾಡುತ್ತಿದೆ. ರೈತರು ದುಬಾರಿ ಅಜೈವಿಕ ಒಳಸುರಿಯುವಿಕೆಗಳಿಗೆ ಬದಲಾಗಿ ಜೈವಿಕವಾದದ್ದನ್ನು ಬಳಸುತ್ತಾರೆ. ಅವರ ದೇಸಿ ತಿಳಿವಳಿಕೆಯು ಇವುಗಳನ್ನು ತಯಾರಿಸಲು ಹಾಗೂ ಬಳಸಲು ನೆರವಾಗುತ್ತವೆ.

ತಮ್ಮ ಮನೆಯ ಹಿತ್ತಲಲ್ಲೂ ತರಕಾರಿ ಬೆಳೆದು ತಮ್ಮ ಕುಟುಂಬಗಳಿಗೆ ಪೌಷ್ಟಿಕಾಂಶದ ಅವಶ್ಯಕತೆ ಪೂರೈಸಿಕೊಳ್ಳಲು ಜನರು ಉತ್ಸುಕರಾಗಿದ್ದಾರೆ. ಸುಮಾರು 380 ರೈತರು ಕೈತೋಟವನ್ನು ಪ್ರಚುರಪಡಿಸಲು ಇರುವ ರಾಜ್ಯ ಸರ್ಕಾರದ ಯೋಜನೆಗೆ ಅರ್ಜಿ ಸಲ್ಲಿಸಿದ್ದಾರೆ. ಇದರಲ್ಲಿ ಫಲಾನುಭವಿಗಳಿಗೆ ರೂ.2750 ಸಹಾಯಧನ ಬೀಜಗಳೊಂದಿಗೆ ದೊರಕುತ್ತದೆ.

◆

**GREEN Foundation**
#25, ACES Layout,1st Main Road,
Ashwath Nagar, RMV 2nd stage,
Bangalore-560094
E-mail: contact@greenfoundation.in

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 3, ಸೆಪ್ಟಂಬರ್ 2020.

# ನಗರ ಕೃಷಿಯ ಮೊದಲ ಹೆಜ್ಜೆಗಳು

**ದೆಬೊರಾ ದತ್ತ**

**ನಗರ ಪ್ರದೇಶಗಳು ಆಹಾರದೊಂದಿಗಿನ ಸಂಬಂಧವನ್ನು ಆಹಾರದ ಉತ್ಪಾದನೆ, ಬಳಕೆ, ಹವಾಮಾನ ಬದಲಾವಣೆ, ಕೃಷಿಯ ಕೈಗಾರಿಕರಣ ಸ್ವರೂಪದಿಂದ ಭೂಮಿ ಹಾಳಾಗುತ್ತಿದ್ದು ಆಹಾರ ಭದ್ರತೆಗೆ ಎದುರಾಗಿರುವ ಸವಾಲುಗಳ ಕುರಿತು ವಿಮರ್ಶಾತ್ಮಕವಾಗಿ ಯೋಚಿಸಬೇಕು. ಸಮುದಾಯ ಆಧಾರಿತ ನಗರ ಕೃಷಿಯ ಕ್ರಮಗಳು ಭೂಮಿ, ರೈತರು, ಪರಿಸರ ವ್ಯವಸ್ಥೆ ಕುರಿತಂತೆ ಸೂಕ್ಷ್ಮತೆ ಹಾಗೂ ವಿಮರ್ಶಾತ್ಮಕ ಅರಿವನ್ನು ಮೂಡಿಸುವಲ್ಲಿ ಪರಿಣಾಮಕಾರಿ ವಿಧಾನವಾಗಿದೆ.**

ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯು ನಗರಗಳಲ್ಲಿದೆ. ಕಳೆದ ಶತಮಾನದಲ್ಲಿ ಊಹೆಗೂ ಮೀರಿ ನಡೆದ ನಗರೀಕರಣವು ಪರಿಸರವು ಇಷ್ಟು ವೇಗವಾಗಿ ಹಾಳಾಗಲು ಕಾರಣವಾಗಿದೆ. ನಗರ ಪರಿಸರವು ವಿಸ್ತಾರಗೊಳ್ಳುತ್ತಿರುವುದು ಆಹಾರ ಅಭದ್ರತೆ, ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆ, ವಾಯು ಮಾಲಿನ್ಯ, ಜಲ ಸಂಪನ್ಮೂಲಗಳ ಅತಿಬಳಕೆ, ಅರಣ್ಯ ನಾಶ ಮತ್ತಿತರ ಸಮಸ್ಯೆಗಳಿಗೆ ಕಾರಣವಾಗಿದೆ. ನಗರೀಕರಣದ ದೆಸೆಯಿಂದ ರೂಪಿಸಲಾಗಿರುವ ನಗರಗಳಲ್ಲಿ ನಾವಿಂದು ಬದುಕುತ್ತಿದ್ದು ಅವು ಸುಸ್ಥಿರತೆಯ ಸವಾಲುಗಳನ್ನೆದುರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.

## ಸಮುದಾಯವು ಒಟ್ಟಾಗಿ ಕೆಲಸ ಮಾಡಲು ನಗರ ಕೃಷಿಯೊಂದು ವೇದಿಕೆ

ಆಹಾರ ಭದ್ರತೆ ಹಾಗೂ ಉತ್ಪಾದನೆ ನಗರೀಕರಣ, ಪರಿಸರ ಸಂಬಂಧಿ ವಿಷಯಗಳೊಂದಿಗೆ ಬೆಸೆದುಕೊಂಡಿದೆ. ಆದರೆ ಇವು ಕಾಣುವುದಿಲ್ಲ. ನಗರದಲ್ಲಿ ಸ್ಥಳಗಳು ಕೃಷಿಯಿಂದ ದೂರ ಉಳಿದಿವೆ. ಆಹಾರವನ್ನು ಸಾವಿರಾರು ಕಿಮೀಯಿಂದ ವಿವಿಧ ಮಧ್ಯವರ್ತಿಗಳ ಮೂಲಕ ತರಿಸಲಾಗುತ್ತದೆ. ಈ ಪ್ರಕ್ರಿಯೆಯು ದುಬಾರಿಯಾದದ್ದು. ಈ ವ್ಯವಸ್ಥೆಯು ಕೃಷಿಕನನ್ನೂ ಶೋಷಿಸುತ್ತದೆ.


ಇತ್ತೀಚಿನ ವರ್ಷಗಳಲ್ಲಿ ಮತ್ತೊಂದು ಹೊಸ ಸಂಕಥನ ಶುರುವಾಗಿದೆ. ಭಾರತದಲ್ಲೂ ಇತ್ತೀಚೆಗೆ ಕಾರ್ಪೊರೇಟ್ ವಲಯದಲ್ಲಿರುವವರು ತಮ್ಮ ಕೆಲಸಗಳನ್ನು ಬಿಟ್ಟು ಕೃಷಿಯನ್ನು ಹವ್ಯಾಸವನ್ನಾಗಿಸಿಕೊಂಡು ತೊಡಗಿಕೊಳ್ಳುತ್ತಿದ್ದಾರೆ. ಆಹಾರ ಭದ್ರತೆ, ಪರಿಸರ ಸಮಗ್ರತೆ ಇದರ ಮುಖ್ಯ ಉದ್ದೇಶ. ಇದು ಕೃಷಿಯಲ್ಲಿನ ಸಾಂಪ್ರದಾಯಿಕ ಪದ್ಧತಿಗಳನ್ನೊಳಗೊಂಡಂತೆ ಪರಿಸರ ಸ್ನೇಹಿಯಾಗಿರುವಂತಹ ಪದ್ಧತಿಗಳನ್ನು ಮನಶ್ಚೇತನಗೊಳಿಸುವ ಪ್ರಯತ್ನ. ಈ ಲೇಖನವು ನಗರ ಪ್ರದೇಶದ ಸಮುದಾಯ ಕೃಷಿ ಎನ್ನುವ ನಗರಗಳ ಪ್ರಯತ್ನವನ್ನು ಕುರಿತು ತಿಳಿಸುತ್ತದೆ.

## ಡ್ರೀಮ್ ಗ್ರೋವ್ (Dream Grove (DG) – ಸಮುದಾಯ ನಡೆಸುತ್ತಿರುವ ನಗರ ಫಾರಂ

ಡ್ರೀಮ್ ಗ್ರೋವ್ ಎನ್ನುವುದು ಮುಂಬಯಿಯಲ್ಲಿರುವ 200 ಚದುರ ಅಡಿ ಸಾರ್ವಜನಿಕ ಉದ್ಯಾನದಲ್ಲಿ ಕೃಷಿ ಚಟುವಟಿಕೆ ಮಾಡುತ್ತಿರುವ ನಗರದ ಸಮುದಾಯ. ಈ ಉದ್ಯಾನವು ಮೊದಲು ನಿರ್ಲಕ್ಷಿತಗೊಂಡು ದುಸ್ಥಿತಿಯಲ್ಲಿತ್ತು. ಇದನ್ನು 2018ರಲ್ಲಿ ಮೇರಿ ಪೌಲ್ ಎನ್ನುವ ಸ್ಥಳೀಯರು ಮಕ್ಕಳು ಮತ್ತು ಹಿರಿಯರ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿದರು. ಆಕೆ ಅಲ್ಲಿನ ನಿವಾಸಿಗಳ ಗುಂಪನ್ನು ರಚಿಸಿಕೊಂಡು ಉದ್ಯಾನವನದ ನಿರ್ವಹಣೆಯನ್ನು ಸ್ವಯಂಪ್ರೇರಿತರಾಗಿ ಮಾಡುವಂತೆ ಮಾಡಿದರು. ಗುಂಪಿನ ಇಬ್ಬರು ಸದಸ್ಯರು ಪ್ರಮೀಳ ಮಾರ್ಟಿಸ್ ಮತ್ತು ದೀಪ್ತಿ ಜಾಂಗಿಯಾನಿ (ನೋಡಿ ಚೌಕ 1) ಅರ್ಬನ್ ಲೀವ್ಸ್ ಎನ್ನುವ ನಗರದ ಕೃಷಿ ಗುಂಪಿನೊಂದಿಗೆ ಕೆಲಸ ಮಾಡಿದ ಅನುಭವ ಹೊಂದಿದ್ದರು. ಅವರಿಗೆ ತರಕಾರಿಗಳನ್ನು ಬೆಳೆದ ಅನುಭವವಿತ್ತು.

ಮಾರ್ಟಿಸ್ ಅವರು ಮುಂದೆ ಬಂದು ಪ್ರತಿಯೊಬ್ಬರು ಉದುರಿದ ಎಲೆಗಳು, ಅಡುಗೆಮನೆ ತ್ಯಾಜ್ಯ, ತೆಂಗಿನ ನಾರನ್ನು ತಮ್ಮ ನೆರೆಹೊರೆಯವರಿಂದ ಸಂಗ್ರಹಿಸುವಂತೆ ಮಾಡಿದರು. ಇದನ್ನು ಉದ್ಯಾನದಲ್ಲಿ ಸಗಣಿ ಮತ್ತು ಗಂಜಲವನ್ನು ಬಳಸಿ ಗೊಬ್ಬರವಾಗಿಸಿದರು

**ದೀಪ್ತಿ ತನ್ನ ಅಪಾರ್ಟ್‌ಮೆಂಟ್ ಗಾರ್ಡನ್‌ನಲ್ಲಿ ಬೆಳೆದ ಉತ್ಪನ್ನಗಳೊಂದಿಗೆ**



ಫೋಟೋ : ದೀಪ್ತಿ

(ಈ ಪ್ರಕ್ರಿಯೆಯನ್ನು ಅಮೃತ ಮಿಟ್ಟಿ ಎಂದು ಕರೆಯುತ್ತಾರೆ). ಸಾವಯವ ವಿಧಾನದಲ್ಲಿ ಪೌಷ್ಟಿಕಾಂಶಯುಕ್ತವಾದ ಮಣ್ಣಿನಲ್ಲಿ ಸಾವಯವ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯಲಾಯಿತು. ಮೊದಲಿಗೆ ಬ್ರಿಹನ್ ಮುಂಬಯಿ ಮುನಿಸಿಪಲ್ ಕಾರ್ಪೊರೇಷನ್ ಈ ಐಡಿಯಾವನ್ನು ಒಪ್ಪಲಿಲ್ಲ ನಂತರ ಸ್ಥಳೀಯರ ಪ್ರತಿಕ್ರಿಯೆ ಮತ್ತು ಉದ್ಯಾನದ ಬದಲಾದ ಸ್ವರೂಪವನ್ನು ನೋಡಿ ಅದನ್ನು ಸಂರಕ್ಷಿಸಲು ಮುಂದಾಯಿತು. ಈಗ ಅವರು ಕೂಡ ಸಮುದಾಯಗಳೇ ನಡೆಸುವ ಆಹಾರ ಉದ್ಯಾನಗಳನ್ನು ಪ್ರೋತ್ಸಾಹಿಸಲಾರಂಭಿಸಿದರು.

ಜಾಂಗಿಯಾನಿಯವರ ಪ್ರಕಾರ ಕಳೆದೆರೆಡು ವರ್ಷಗಳಲ್ಲಿ ಹಣ್ಣುಗಳು, ತರಕಾರಿಗಳು ಮತ್ತು ಗಿಡಮೂಲಿಕೆಗಳು ಸೇರಿದಂತೆ 50 ಬಗೆಯ ಗಿಡಗಳನ್ನು ಬೆಳೆಸಿದ್ದಾರೆ. ಇವುಗಳಲ್ಲಿ ಪೈನಾಪಲ್‌ಗಳು, ಬಾಳೆಹಣ್ಣು, ಸುವರ್ಣಗಡ್ಡೆ, ಮೂಲಂಗಿ, ಟೊಮೊಟೊ, ಹಾಗಲಕಾಯಿ, ಮೆಣಸಿನ ಕಾಯಿ, ಬೆಂಡೆಕಾಯಿ ಇತ್ಯಾದಿಗಳನ್ನು ಬೆಳೆಯಲಾಯಿತು. ಮಾರ್ಟಿಸ್‌ರವರ ಪ್ರಕಾರ ಜನರು ಗಿಡ ಬೆಳೆಸುವ ಚಟುವಟಿಕೆಗಳಲ್ಲಿ ಅಂದರೆ ಗೊಬ್ಬರ, ಉಳುಮೆ, ಗಿಡಗಳ ಆರೈಕೆ ಇತ್ಯಾದಿಗಳಲ್ಲಿ ಸ್ವತಃ ಭಾಗವಹಿಸುವ ಮೂಲಕ ಆಹಾರ ಬೆಳೆದುಕೊಳ್ಳುವ ಪ್ರಕ್ರಿಯೆಯ ಭಾಗವಾದರು. ಇದರಲ್ಲಿ 7ರಿಂದ 80ರವರೆಗಿನ ವಯೋಮಾನದವರು ಇದ್ದರು. ಇದರಿಂದ ತಲೆಮಾರುಗಳ ನಡುವಿನ ಹೊಸ ಬಗೆಯ ಸಂವಾದ ಆರಂಭವಾಯಿತು. ಪ್ರತಿ ವಾರಾಂತ್ಯದಲ್ಲಿ ಡಿಜಿಯ 20 ಮಂದಿ ಸ್ವಯಂಸೇವಕರು ಉದ್ಯಾನಕ್ಕೆ ಭೇಟಿ ನೀಡಿ ಬಿತ್ತನೆ, ನಾಟಿ, ಕೊಯ್ಲು ಮತ್ತು ನೀರುಣಿಸುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. "ನೀವು ವೈಯುಕ್ತಿಕವಾಗಿ ಭಾಗವಹಿಸಿದಾಗ ಇದರ ಮಹತ್ವ ಅರಿವಾಗುತ್ತದೆ. ನಾವು ಗಿಡಗಳನ್ನಷ್ಟೇ ಬೆಳೆಸುತ್ತಿಲ್ಲ. ಮನುಷ್ಯರನ್ನೂ ಬೆಳೆಸುತ್ತಿದ್ದೇವೆ" ಎಂದಾಕೆ ಹೇಳುತ್ತಾರೆ.

ಈ ಗುಂಪು ಪ್ರತಿವಾರಾಂತ್ಯದಲ್ಲಿ ರೈತರ ಮಾರುಕಟ್ಟೆಯಿಂದ ಸಾವಯವ ಬೀಜಗಳನ್ನು, ದಿನದ ಕೊನೆಗೆ ಉಳಿಯುತ್ತಿದ್ದ ತ್ಯಾಜ್ಯವನ್ನು ಗೊಬ್ಬರಕ್ಕಾಗಿ ಸಂಗ್ರಹಿಸುತ್ತಿತ್ತು. ಆಹಾರ ವ್ಯವಸ್ಥೆಯಲ್ಲಿ ಬೆಳೆದ ಆಸಕ್ತಿಯಿಂದಾಗಿ ಪ್ರಮೀಳ ಅವರು 'ಗ್ರೋವರ್ಸ್ ಟೂ ಬಾಂದ್ರಾ ಹೋಮ್ಸ್' ಎನ್ನುವ ಗುಂಪನ್ನು ಲಾಕ್ಡೌನ್ ಸಮಯದಲ್ಲಿ ರೂಪಿಸಿದರು. ಇದರ ಮೂಲಕ ಅವರು ರೈತ ಗ್ರಾಹಕರ ನಡುವೆ ಸಂಪರ್ಕಸೇತುವಾದರು. ರೈತರ ಉತ್ಪನ್ನಗಳನ್ನು ಗುಂಪಿನ ಸದಸ್ಯರು ತಮ್ಮ ಸ್ನೇಹಿತರು ಮತ್ತು ಕುಟುಂಬದ ಇತರರಿಗೆ ಪರಿಚಯಿಸಿದ ಪರಿಣಾಮವಾಗಿ ಕ್ರಮೇಣ ಈ ಜಾಲವು ವಿಸ್ತರಿಸಿತು.

## ಲಾಕ್‌ಡೌನ್ ಸಮಯದಲ್ಲಿ ಬೆಳೆದ ಸಂಪರ್ಕ ಜಾಲ

ಪ್ರಮೀಳ ಮಾರ್ಟಿಸ್ ಕಳೆದ ಕೆಲವು ವರ್ಷಗಳಿಂದ ಅಕ್ಕಿ ಮತ್ತು ಬೇಳೆಕಾಳುಗಳನ್ನು ಸಾವಯವ ರೈತರಿಂದ ತೆಗೆದುಕೊಳ್ಳುತ್ತಿದ್ದರು. ಅವರೊಂದು ವಾಟ್ಸಪ್ ಗುಂಪನ್ನು ಮಾಡಿ (ಗ್ರೋವರ್ ಟೂ ಬಾಂದ್ರಾ ಹೋಂ) ರಚಿಸಿಕೊಂಡರು. ಇದರಲ್ಲಿ ರೈತರು ತಮ್ಮ ಉತ್ಪನ್ನಗಳ ಕುರಿತು ವಿವರ ಹಂಚಿಕೊಳ್ಳಬಹುದಿತ್ತು. ಆಕೆಯ ಪ್ರಕಾರ ರೈತರು ಹಂಚಿಕೊಂಡ

**ನಗರ ಗ್ರಾಹಕರ ಸೂಕ್ಷ್ಮತೆಯು ಸಮುದಾಯದ ಅನುಭವವನ್ನು ಆಧರಿಸಿರುತ್ತದೆ. ಬೇಡಿಕೆ ಪೂರೈಕೆಗಳು ಸುಸ್ಥಿರ ಕೃಷಿಯ ಪ್ರಯತ್ನಗಳಿಗೆ ಬಲ ನೀಡುತ್ತದೆ.**

**ಚೌಕ 1 : ಸ್ವಯಂಸೇವಕರ ವಿವರಗಳು**

ಪ್ರಮೀಳ ಮಾರ್ಟಿಸ್‌ರವರು ಫೈನಾನ್ಸ್ ಹಿನ್ನಲೆಯಿಂದ ಬಂದವರು. ಅವರು ಸ್ವಯಂನಿವೃತ್ತಿ ತೆಗೆದುಕೊಂಡು ನಗರ ಸಮುದಾಯ ಕೃಷಿ ಗುಂಪನ್ನು (ಅರ್ಬನ್ ಲೀವ್ಸ್) 2013ರಲ್ಲಿ ಸೇರಿದರು. ಆಕೆ ಅರ್ಬನ್ ಲೀವ್ಸ್‌ನವರು ಆಯೋಜಿಸಿದ್ದ ಕೈತೋಟದ ಕಾರ್ಯಾಗಾರದಲ್ಲಿ ಭಾಗವಹಿಸಿದರು.

ದೀಪ್ತಿ ಜಾಂಗಿಯಾನಿಯವರು ಪತ್ರಿಕೋದ್ಯಮದ ಹಿನ್ನಲೆಯಿಂದ ಬಂದವರು. ಆಕೆಗೆ ತ್ಯಾಜ್ಯದ ಮರುಬಳಕೆಯಲ್ಲಿ ಆಸಕ್ತಿಯಿತ್ತು. ಅವರು ಮನೆಯಲ್ಲಿಯೇ ಗೊಬ್ಬರ ತಯಾರಿಸುತ್ತಿದ್ದರು. ನಂತರ ಅರ್ಬನ್ ಲೀವ್ಸ್‌ನ ಸ್ವಯಂಸೇವಕರಾದರು.

ವಿವರಗಳಿಂದಾಗಿ ಅವರ ಬಗೆಗೆ ನಂಬಿಕೆ ಬೆಳೆದು ಸಂಪರ್ಕ ಬೆಳೆಸಿಕೊಳ್ಳುವಂತೆ ಮಾಡಿತು. ಉದಾಹರಣೆಗೆ ಈ ಗುಂಪಿನಲ್ಲಿ ತನ್ನ ಉತ್ಪನ್ನಗಳನ್ನು ಮಾರಿದ ಸುಶೀಲ್ ಬೊರ್ಕರ್ ಅವರು ಬರೆದ ಪೋಸ್ಟ್ ಹೀಗಿತ್ತು. ಇವರು ವೃತ್ತಿಯಿಂದ ವ್ಯಾಪಾರಸ್ಥರು. ಅವರಿಗೆ ಕೃಷಿಯಲ್ಲಿ ಆಸಕ್ತಿಯಿರುವುದರಿಂದ ಕಳೆದ 30 ವರ್ಷಗಳಿಂದ ವಾರಾಂತ್ಯದಲ್ಲಿ ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಐಐಟಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಅಲ್ಲಿನ ವೈಲ್ಡ್‌ಲೈಫ್ ಕ್ಲಬ್‌ನ ಸದಸ್ಯರಾಗಿದ್ದಾಗಿನ ತಮ್ಮ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಅವರು ಯಾವುದೇ ರಾಸಾಯನಿಕ ಗೊಬ್ಬರ ಅಥವ ಕೀಟನಾಶಕಗಳನ್ನು ತಮ್ಮ ಭೂಮಿಯಲ್ಲಿ ಬಳಸುವುದಿಲ್ಲ. ಹೀಗೆ ಸಾವಯವ ವಿಧಾನದಲ್ಲಿ ಬೆಳೆದ ತಮ್ಮ ಉತ್ಪನ್ನಗಳ ಕುರಿತು ಗುಂಪಿನಲ್ಲಿ ಹೀಗೆ ಬರೆದುಕೊಂಡಿದ್ದರು :

"ನಮ್ಮ ಕೃಷಿ ಉತ್ಪನ್ನಗಳನ್ನು ಈ ವಾರ ನಿಮಗೆ ತಲುಪಿಸಲು ಸಂತೋಷವಾಗುತ್ತದೆ. ನಾವು ಪದ್ಮಶ್ರೀ ಸುಭಾಷ್ ಪಾಳೇಕರ್ ನೈಸರ್ಗಿಕ ಕೃಷಿ ವಿಧಾನವನ್ನು ಅನುಸರಿಸುತ್ತೇವೆ. ಇದು ಘನಾಮೃತ, ಜೀವಾಮೃತವನ್ನು ಬಳಸುತ್ತದೆ. ಈ ಗೊಬ್ಬರವನ್ನು ತಯಾರಿಸಲೆಂದೇ 18 ದೇಸಿ ಹಸುಗಳನ್ನು (ಹಸುಗಳು, ದನಗಳು ಮತ್ತು ಕರುಗಳು) ಇಟ್ಟುಕೊಂಡಿದ್ದೇವೆ. ನಮ್ಮೆಲ್ಲ ಉತ್ಪನ್ನಗಳು 100% ಸಾವಯವ".

ನಮ್ಮಲ್ಲಿ ಮೂರು ರೀತಿ ಮಾವಿನ ಹಣ್ಣುಗಳು ಸಿಗುತ್ತವೆ : ಹಪೂಸ್ (80%), ರತ್ನ (10%), ಕೇಶರ್ (10%). ಮಾವನ್ನು ಮರದಲ್ಲೇ ಅರ್ಧ ಹಣ್ಣಾಗುವವರೆಗೂ ಬಿಡಲಾಗುತ್ತದೆ. ನಂತರ ಅದನ್ನು ಹುಲ್ಲಿನಲ್ಲಿಟ್ಟು ಪೂರ್ತಿ ಹಣ್ಣು ಮಾಡಲಾಗುತ್ತದೆ. ಮಾವಿನ ಹಣ್ಣುಗಳನ್ನು ಅರ್ಧ/ಪೂರ್ತಿ ಹಣ್ಣಾದ ಸ್ಥಿತಿಯಲ್ಲಿ ತಲುಪಿಸಲಾಗುವುದು. ಕನಿಷ್ಠ ಆರ್ಡರ್ 8 ಡಜನ್. ಮಾವಿನ ಗಾತ್ರದ ಆಧಾರದ ಮೇಲೆ +1\–1 ಹೆಚ್ಚು ಕಡಿಮೆ ಆಗಬಹುದು.

ಗ್ರಾಹಕರು ಕೂಡ ರೈತರಿಂದ ಕೊಂಡ ಉತ್ಪನ್ನಗಳ ಕುರಿತು ತಮ್ಮ ಅನುಭವವನ್ನು ಹಂಚಿಕೊಳ್ಳುವ ಮೂಲಕ ಅವುಗಳ ಕುರಿತು ಪ್ರಚಾರ ಹಾಗು ಜಾಗೃತಿಯನ್ನು ಮೂಡಿಸಿದರು. ದೀಪ್ತಿಯವರ ಪ್ರಕಾರ ಆಯಾ ಋತುವಿನಲ್ಲಿ ಸಿಗುವ ಹಣ್ಣುಗಳ ಕುರಿತು ಗ್ರಾಹಕರು ಅರಿತರು.

## ಸ್ಥಳೀಯ ಉತ್ಪನ್ನಗಳ ಪೂರೈಕೆಯನ್ನು ಬೆಂಬಲಿಸಲು ಕಾರ್ಯವಿಧಾನಗಳನ್ನು ಸೃಷ್ಟಿಸುವಲ್ಲಿ ಸಕ್ರಿಯ ಭಾಗವಹಿಸುವಿಕೆ

ಗುಂಪಿನ ಸದಸ್ಯರು ರೈತರಿಂದ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನಗಳನ್ನು ಖರೀದಿಸಿ ಅವುಗಳನ್ನು ನಗರಕ್ಕೆ ತರಲು ಆಗುವ ಸಾರಿಗೆಯ ವೆಚ್ಚವನ್ನು

ಒಣಗಿದ ಎಲೆಗಳಂತಹ ಜೈವಿಕ ತ್ಯಾಜ್ಯವನ್ನು ಗೊಬ್ಬರವಾಗಿಸುವ ಮೂಲಕ ಅಮೃತ ಮಿಟ್ಟಿ ತಯಾರಿಸಲಾಗುತ್ತದೆ. ನೀರು, ಗಂಜಲ, ಸಗಣಿ ಮತ್ತು ಸಾವಯವ ಕಪ್ಪು ಬೆಲ್ಲವನ್ನು ಬಳಸಿ ಅಮೃತ ಜಲವನ್ನು ತಯಾರಿಸಲಾಗುತ್ತದೆ.

ಕಡಿಮೆಗೊಳಿಸುವ ಜವಾಬ್ದಾರಿಯನ್ನು ಹೊತ್ತರು. ಕೇವಲ ಗ್ರಾಹಕರಾಗಿರುವ ಬದಲು ಅವರು ಉತ್ಪನ್ನಗಳ ಮಾಲೀಕತ್ವವನ್ನು ಅನುಭವಿಸಿದರು. ರೈತರಿಗೆ ಜೊತೆಯಾದರು. ಉದಾಹರಣೆಗೆ ಗುಂಪಿನವರು ಈರುಳ್ಳಿ ಮತ್ತು ಹಣ್ಣುಗಳನ್ನು ವಿವಿಧ ರೈತರಿಂದ ಕೊಂಡು ಅದನ್ನು ತಮ್ಮಲ್ಲೇ ವಿತರಿಸಿಕೊಂಡರು.

ಇದರರ್ಥ ಎಲ್ಲವೂ ಯೋಜಿಸಿದಂತೆ ಆಯ್ತು ಎಂದಲ್ಲ. ಕೆಲವೊಮ್ಮೆ ಉತ್ಪನ್ನದ ಪ್ರಮಾಣ ಇಲ್ಲವೇ ಗುಣಮಟ್ಟವನ್ನು ನಿರ್ವಹಿಸುವುದು ಕಷ್ಟವಾಗುತ್ತಿತ್ತು. ಆದರೂ ಪ್ರಮೀಳ ಅವರು ರೈತರು ಮತ್ತು ಗ್ರಾಹಕರ ನಡುವೆ ಸಂಪರ್ಕಸೇತುವಾಗಲು ಮುಂದಾದರು. ಇದರಿಂದ ಆಹಾರ ವೈವಿಧ್ಯತೆಯ ಕುರಿತು ಹೆಚ್ಚು ತಿಳಿಯಬಹುದು ಎಂದು ಆಕೆಗೆ ಅನ್ನಿಸಿತು. ಗುಂಪಿನಲ್ಲಿ ಈ ಮಾಹಿತಿಗಳನ್ನು ಹಂಚಿಕೊಂಡದ್ದರಿಂದ ಉಳಿದವರು ಈ ಕುರಿತು ಆಸಕ್ತಿ ವಹಿಸುವಂತಾಯಿತು ಎಂದು ಹೇಳಿದರು.

### ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ ಬಲ

ರೈತರೊಂದಿಗಿನ ನಿರಂತರ ಮಾತುಕತೆ ಮತ್ತು ಪ್ರತಿಕ್ರಿಯೆಗಳು ಗುಂಪಿಗೆ ತಮ್ಮ ಆಯ್ಕೆ, ಸಾಮೂಹಿಕ ಶ್ರಮಕ್ಕೆ ಬಲ ತುಂಬಿದೆ.

"ಈರುಳ್ಳಿಯನ್ನು ಕೊಂಡುಕೊಂಡ ನಾವೆಲ್ಲರೂ ಅಮಿತ್‌ಗೆ ಥ್ಯಾಂಕ್ಸ್ ಹೇಳಬೇಕು. ಈರುಳ್ಳಿ ರೈತ ಅವಿಯೊಂದಿಗೆ ಮಾತಾಡಿ ಅವರು ನಮಗೆ ತರಿಸಿ ವಿತರಿಸುವಂತೆ ಮಾಡಿದರು. ಅವಿ ಮತ್ತವರ ನೆರೆಹೊರೆಯ ರೈತರ ಬಳಿ ಬೇಸಿಗೆಯಲ್ಲಿ 6 ಟನ್ ಈರುಳ್ಳಿ ಇತ್ತು. ಮಾರಾಟಗಾರರಿಗೆ ಕಡಿಮೆ ಬೆಲೆಗೆ ಅವುಗಳನ್ನು ನೀಡಲು ನಿರಾಕರಿಸಿ ಮುಂಬೈನಲ್ಲಿ ತಾವೇ ಖುದ್ದು ಮಾರಲು ನಿರ್ಧರಿಸಿದರು. ಅವರು ಕಳೆದ ವಾರ 1500 ಕೆಜಿಯಷ್ಟು ಮಾರಲು ತಂದರು. ನಾವು ಅದರಲ್ಲಿ 100 ಕೆಜಿಯಷ್ಟು ಮಾತ್ರ ಕೊಂಡೆವು. ಆದರೂ ಖುಷಿ ಕೊಟ್ಟಿತು."

ಗುಂಪು ಸಣ್ಣ ಪ್ರಮಾಣದ ಉತ್ಪನ್ನಗಳಿಗೂ (ತೆಂಗಿನಕಾಯಿ, ಉಪ್ಪಿನಕಾಯಿ ಇತ್ಯಾದಿ) ನೆರವು ನೀಡಿತು. ಆ ಮೂಲಕ ಸ್ಥಳೀಯ ಪೂರೈಕೆಗಳಿಗೆ ಕೊಂಡಿಯನ್ನು ನಿರ್ಮಿಸಿತು.

### ಮುಂದಿನ ಹಾದಿ : ರೈತರ ಉತ್ಪನ್ನಗಳಿಗೆ ನೆರವು ನೀಡಲಿರುವ ಹಾದಿಗಳು

ಹೊಸ ಸಂಕಥನಗಳು, ಉದಾಹರಣೆಗಳು ಗುಂಪು ನಗರ ಕೃಷಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ರೈತರ ಶ್ರಮಕ್ಕೆ ಬೆಲೆಕೊಟ್ಟು ಅವರೊಂದಿಗಿವೆ ಎನ್ನುವುದನ್ನು ತೋರುತ್ತಿದೆ. ಅವರು ಸ್ಥಳೀಯ ಹವಾಮಾನ ಪರಿಸ್ಥಿತಿಗಳು ಉತ್ಪನ್ನದ ಪ್ರಮಾಣ, ಗುಣಮಟ್ಟದ ಮೇಲೆ ಬೀರುತ್ತಿರುವ ಪ್ರಭಾವವನ್ನು ಅರ್ಥಮಾಡಿಕೊಂಡಿದ್ದಾರೆ. ರೈತರೊಂದಿಗಿನ ನಿರಂತರ ಸಂವಾದಗಳು ಹಾಗೂ ಪ್ರತಿಕ್ರಿಯೆಗಳು ತಾವು ಕೂಡ ಈ ಪ್ರಕ್ರಿಯೆಯ ಭಾಗೀದಾರರು ಎನ್ನುವ ಭಾವವನ್ನು ಅವರಲ್ಲಿ ಹುಟ್ಟುಹಾಕಿದೆ. ನಂಬಿಕೆಯ ಬುನಾದಿಯ ಮೇಲೆ ನಿಂತಿರುವ ಈ ಸಂಬಂಧವು ಒಬ್ಬರು ಮತ್ತೊಬ್ಬರನ್ನು ತೃಪ್ತಿಗೊಳಿಸಲು ಸದಾ ತುಡಿಯುವಂತಾಯಿತು (ಗ್ರಾಹಕರಿಗೆ ಗುಣಮಟ್ಟ ರೈತರಿಗೆ ಉತ್ತಮ ಬೆಲೆ).

ಸಮುದಾಯದ ಅನುಭವಗಳ ಆಧಾರದ ಮೇಲೆ ಬೇಡಿಕೆ ಹಾಗೂ ಪೂರೈಕೆಗಳು ಸುಸ್ಥಿರವಾದ ಕೃಷಿ ಕ್ರಮಗಳನ್ನು ಕೈಗೊಳ್ಳಲು ನೆರವು ನೀಡುತ್ತದೆ. ರೈತರ ಮಾರುಕಟ್ಟೆಗಳು ಮತ್ತು ಸ್ವಯಂಸೇವಕ ಸಂಘಗಳ ನಡುವಿನ ಸಹಯೋಗಗಳು ಸ್ಥಳೀಯ ಮಟ್ಟದಲ್ಲಿ ಸಂಪರ್ಕಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡುತ್ತದೆ. ಜೊತೆಗೆ ಬದಲಿ ಆರ್ಥಿಕ ವ್ಯವಹಾರ ವ್ಯವಸ್ಥೆಗಳನ್ನು ಅಂದರೆ ಬಾರ್ಟರ್, ಸಮಯ, ಸಂಪನ್ಮೂಲಗಳು ಇತ್ಯಾದಿಗಳನ್ನು ಕಟ್ಟಿಕೊಳ್ಳಲು ಸಹಾಯವಾಗುತ್ತದೆ. ನಗರ ಕೃಷಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳು ಅಥವ ಸಂಪನ್ಮೂಲಗಳನ್ನು ಪ್ರೋತ್ಸಾಹಿಸಬಹುದು. ನಗರ ಕೃಷಿಗೆ ಅಗತ್ಯವಾದ ಕ್ರಮಗಳು ಅಂದರೆ ಉದ್ಯಾನಗಳ ನಿಯೋಜನೆಯನ್ನು ನಗರ ಯೋಜನೆಯ ಭಾಗವಾಗಿರುವಂತೆ ಮಾಡಬಹುದು. ನಗರಾಧಾರಿತ ಆಹಾರ ಉದ್ಯಾನಗಳು ಜಾಗೃತಿ ಮೂಡಿಸುವಲ್ಲಿ ಹಾಗೂ ಸ್ಥಳೀಯ ರೈತರೊಂದಿಗೆ ಸಂಪರ್ಕ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಬಲ್ಲದು. ಈ ರೀತಿಯ ಕ್ರಮಗಳು ನಗರ ಯೋಜನೆ ಕುರಿತಾದ ನೀತಿರೂಪಣೆಯಲ್ಲಿ ಜಾಗ ಪಡೆಯಬೇಕು.

**ಗ್ರಂಥಸೂಚಿ :**


Dutta, D., & Chandrasekharan, S. (2018). **Doing to being: Farming actions in a community coalesce into pro-environment motivations and values.** *Environmental Education Research, 24(8), 1192-1210.*

Parnell, S., Elmqvist, T., McPhearson, T., Nagendra, H., & Sörlin, S. (2018). **Introduction: Situating knowledge and action for an urban planet.** *The urban planet: Knowledge towards sustainable cities, 1-16.*


◆


**Deborah Dutta**
Senior Research Fellow
Living Farm Incomes
Project Institute of Rural Management
Anand-388001
E-mail: deborah@irma.ac.in;
debbiebornfree@gmail.com



**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 3, ಸೆಪ್ಟಂಬರ್ 2020.

# ಸ್ಥಳೀಯವಾಗಿ ತರಕಾರಿಗಳ ಕೃಷಿ

**ಉಷಾ ಎಸ್, ಮಂಜು ಎಂ ನಾಯರ್ ಮತ್ತು ದೇವಿಕ ಎ ಎಸ್**

**ಕೋವಿಡ್ ಪಿಡುಗಿನ ಸಮಯದಲ್ಲಿ ಪ್ರತಿರೋಧಕ ಶಕ್ತಿಯನ್ನು ಗಳಿಸುವುದು ಹಿಂದೆಂದಿಗಿಂತ ಮಹತ್ವವನ್ನು ಪಡೆದುಕೊಂಡಿತು. ಕೇರಳದ ಜನ ತಮ್ಮ ಹಿತ್ತಿಲಲ್ಲಿ, ಛಾವಣಿಗಳಲ್ಲಿ ಸುರಕ್ಷಿತ ಆಹಾರವನ್ನು ಬೆಳೆಯಲು ಸಾಕಷ್ಟು ವಿಧಾನಗಳನ್ನು ಪ್ರಯತ್ನಿಸಿದರು. ಆ ಮೂಲಕ ಆರೋಗ್ಯಕರ ಪೌಷ್ಟಿಕಾಂಶ ಆಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲು ಬಯಸಿದರು.**

ಕಳೆದ 2–3 ದಶಕಗಳಿಂದ ವೇಗವಾಗಿ ನಗರೀಕರಣವಾಗುತ್ತಿರುವ ಗ್ರಾಹಕರ ರಾಜ್ಯವಾಗಿದೆ. ಕಳೆದ 10–15 ವರ್ಷಗಳಿಂದ ನಮ್ಮ ಥನಾಲ್ ಸಂಸ್ಥೆಯೂ ಸೇರಿದಂತೆ ಹಲವು ಗುಂಪುಗಳು ಕೇರಳದಲ್ಲಿ ಸಾವಯವ ತರಕಾರಿ ಕೃಷಿಯನ್ನು ಪ್ರಚುರಪಡಿಸಲು ಪ್ರಯತ್ನಿಸುತ್ತಿವೆ. ಇದು ಕೆಲವು ನಗರವಾಸಿಗಳಲ್ಲಿ ಸ್ವಲ್ಪ ಬದಲಾವಣೆಯನ್ನು ತಂದಿದೆ. ಆರೋಗ್ಯದ ಕಾಳಜಿಯಿರುವವರು ತಮ್ಮ ಮನೆಗೆ ಅಗತ್ಯವಿರುವಷ್ಟು ತರಕಾರಿಗಳನ್ನು ತಮ್ಮ ಮನೆಯ ಹಿತ್ತಿಲಲ್ಲಿ, ಛಾವಣಿಗಳಲ್ಲಿ ಬೆಳೆಯಲಾರಂಭಿಸಿದರು. ಅವರಲ್ಲಿ ಹಲವರು ತಮ್ಮ ಉತ್ಪನ್ನಗಳನ್ನು ನೆರೆಹೊರೆಯವರೊಂದಿಗೆ ಹಂಚಿಕೊಳ್ಳಲು ಹಾಗೂ ವಾರಾಂತ್ಯದ ಮಾರುಕಟ್ಟೆಗಳಲ್ಲಿ ಸಮಾನಮನಸ್ಕರಿಗೆ ಮಾರಾಟಮಾಡಲು ಶುರುಮಾಡಿದರು.

## ಕೋವಿಡ್ – 19 ಬದಲಿಸಿದ ಬದುಕು

ಕೋವಿಡ್ 19 ಪಿಡುಗು ಹಾಗೂ ಲಾಕ್‌ಡೌನ್ ಬದುಕಿನ ಗತಿಯನ್ನು ಬದಲಿಸಿಬಿಟ್ಟಿತು. ಲಾಕ್‌ಡೌನ್‌ನಂತಹ ಅನಿಶ್ಚತತೆಯನ್ನು ಎದುರಿಸಲು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸ್ಥಳೀಯ ಆಹಾರ ಉತ್ಪಾದಕರು ಅದರಲ್ಲೂ ತರಕಾರಿ ಕೃಷಿಕರಿಗೆ "ಆಹಾರ ಸ್ವಾವಲಂಬನೆ"ಗೆ ಕರೆಕೊಟ್ಟರು. ಕೃಷಿ ನಿರ್ದೇಶಕರಾದ ಡಾ. ಕೆ. ವಾಸುಕಿಯವರು ಮನೆಯಲ್ಲೇ ಆಹಾರವನ್ನು ಬೆಳೆದುಕೊಳ್ಳಲು ಸ್ಥಳೀಯ ಕೃಷಿಕರು ಮತ್ತು ಯುವಸ್ವಯಂಸೇವಕರ ಚಳುವಳಿಯನ್ನು ಬೆಂಬಲಿಸಿದರು. ಕಳೆದ ಮೂರು ತಿಂಗಳುಗಳಲ್ಲಿ ರಾಜ್ಯವು ಆಹಾರ ಭದ್ರತೆಯ ಯೋಜನೆಯನ್ನು ಆರಂಭಿಸಿತು. ಇದು ಮನೆಗಳಲ್ಲಿ ಹಾಗೂ ಪಾಳುಬಿದ್ದ ಭೂಮಿಗಳಲ್ಲಿ ಕೃಷಿಯನ್ನು ಪ್ರೋತ್ಸಾಹಿಸಿತು. ಇದು ಮುಖ್ಯವಾಗಿ ತಮಗಾಗಿ ತರಕಾರಿಗಳನ್ನು ಬೆಳೆದುಕೊಳ್ಳುವುದು ಜಾನುವಾರು ಸಾಕಾಣಿಕೆಯನ್ನು ಒಳಗೊಂಡಿತ್ತು. ಮಾಧ್ಯಮಗಳು ಅದರಲ್ಲೂ ಸಾಮಾಜಿಕ ಮಾಧ್ಯಮಗಳು ತರಕಾರಿ ಕೃಷಿ ಮಾಡಲು ಪ್ರೋತ್ಸಾಹಿಸಿದವು. ಕೃಷಿ ಇಲಾಖೆಯು ಬೀಜಗಳನ್ನು ಪೂರೈಸಿತು. ಕೃಷಿಕರೊಂದಿಗೆ ಕೆಲಸ ಮಾಡುತ್ತಿರುವ ಹಲವು ಗುಂಪುಗಳು ಸ್ಥಳೀಯವಾಗಿ ತರಕಾರಿ ಬೀಜಗಳನ್ನು ವಿತರಿಸಿದವು. ಇದು ನೈಸರ್ಗಿಕ ಕೃಷಿ ವಿಧಾನದಲ್ಲಿ ಅಲ್ಲವಾದರೂ ಗಿಡಗಳನ್ನು ಬಹಳ ಜತನದಿಂದ ಬೆಳೆಸಲಾಯಿತು. ಗೊಬ್ಬರಗಳು (ಒಣ ಸಗಣಿ ಗೊಬ್ಬರ), ಕೀಟನಾಶಕಗಳನ್ನು (ಸಸ್ಯಗಳು, ಬೇವಿನ ಎಣ್ಣೆ, ಕಾಂತಾರಿ ಮೆಣಸಿನಕಾಯಿ, ಬೆಳ್ಳುಳ್ಳಿ ಮತ್ತು ಸೋಪು) ಹೆಚ್ಚಾಗಿ ಬಳಸಲಾಯಿತು. ಈ ಉತ್ಪನ್ನಗಳನ್ನು ನೆರೆಹೊರೆಯವರೊಂದಿಗೆ ಲಾಕ್‌ಡೌನ್ ಸಮಯದಲ್ಲಿ ಹಂಚಿಕೊಳ್ಳಲಾಯಿತು. ಲಾಕ್‌ಡೌನ್ ತೆರವಾದ ನಂತರವೂ ಇದು ಮುಂದುವರೆದಿದೆ. ಜನರು ಚೈನೀಸ್ ಆಲೂಗಡ್ಡೆ, ಕೆಸುವಿನ ಗಡ್ಡೆ, ಮರಗೆಣಸು, ಸುವರ್ಣಗಡ್ಡೆ ಇತ್ಯಾದಿಗಳನ್ನು ತಮ್ಮ ಮನೆಯ ಹಿತ್ತಲಿನಲ್ಲಿ ಬೆಳೆಯಲಾರಂಭಿಸಿದರು.



**ಸಾಜಿ ಕುಮಾರಿ ಪಿಜಿಎಸ್ ಮಾನ್ಯತೆ ಪಡೆದ ಕೃಷಿಕರು. ಈಕೆ ಸಾವಯವ ಮಾರುಕಟ್ಟೆಗೆ ತರಕಾರಿಗಳನ್ನು ಪೂರೈಕೆ ಮಾಡುತ್ತಿದ್ದಾರೆ.**

## ಪಾಳುಬಿದ್ದ ಭೂಮಿಗಳು ಆಹಾರ ಭೂಮಿಗಳಾಗಿ ಪರಿವರ್ತನೆ

ರೈತರೊಂದಿಗೆ ಕಳೆದೆರಡು ದಶಕಗಳಿಂದ ಕೆಲಸ ಮಾಡುತ್ತಿರುವ ಥನಾಲ್ ಸಂಸ್ಥೆಯು ಪ್ರಾಜೆಕ್ಟ್ ಫುಡ್ ಸ್ಕೇಪ್ ಎನ್ನುವ ಯೋಜನೆಯನ್ನು ಏಪ್ರಿಲ್‌ನಲ್ಲಿ ಆರಂಭಿಸಿತು. ಈ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿನ ಪಾಳುಭೂಮಿಯನ್ನು ಆಹಾರ ಪ್ರದೇಶಗಳಾಗಿ ಪರಿವರ್ತಿಸುವ ಉದ್ದೇಶವನ್ನು ಹೊಂದಿದೆ. ಜನರಿಂದ ಹಣವನ್ನು ಸಂಗ್ರಹಿಸಿ ಆ ಹಣವನ್ನು ರೈತರು ಬೆಳೆ ಕೊಯ್ಲು ಮಾಡಿದ ನಂತರ ಆಹಾರ ಪದಾರ್ಥಗಳಾಗಿ ನೀಡುವುದು ಇದರ ಹಿಂದಿದ್ದ ಐಡಿಯಾ.

ರೈತರು ಹಾಗೂ ಗ್ರಾಮೀಣ ಯುವಕರಿಗೆ ಬೀಜಗಳು ಮತ್ತು ಜೈವಿಕ ಗೊಬ್ಬರಗಳಂತಹ ಒಳಸುರಿಯುವಿಕೆಗಳನ್ನು ನೀಡಲಾಯಿತು. ಜೊತೆಗೆ ಕೀಟ ಹಾಗೂ ರೋಗ ನಿರ್ವಹಣೆ ಮತ್ತು ಕೃಷಿಪರಿಸರ ಪದ್ಧತಿಗಳ

ಕುರಿತು ತರಬೇತಿ ನೀಡುವ ಮೂಲಕ ನೆರವು ನೀಡಲಾಯಿತು. ಕಳೆದೆರಡು ತಿಂಗಳಲ್ಲಿ ನಾವು ಸುಮಾರು 800 ರೈತರಿಗೆ ಈ ಒಳಸುರಿಯುವಿಕೆಗಳನ್ನು ಒದಗಿಸಿ ಸಾವಯವ ವಿಧಾನದಲ್ಲಿ ಮಣ್ಣು, ಕೀಟ ಮತ್ತು ರೋಗ ನಿರ್ವಹಣಾ ವಿಧಾನಗಳ ಕುರಿತು ತರಬೇತಿ ನೀಡಿದೆವು. ಇದು ಪಾಲಕ್ಕಾಡಿನ ಅಟ್ಟಪ್ಪಾಡಿ ಮತ್ತು ನಾರನಮೂಜಿಯ ಪಥನಮತ್ತಟ್ಟ ಜಿಲ್ಲೆಗಳಲ್ಲಿನ ಬುಡಕಟ್ಟು ಸಮುದಾಯಗಳನ್ನು ಒಳಗೊಂಡಿದೆ. ಇಲ್ಲಿ ಕಳೆದ 20–30 ವರ್ಷಗಳಲ್ಲಿ ಆಹಾರ ಉತ್ಪಾದನೆಯ ಪ್ರಮಾಣವು ಗಣನೀಯವಾಗಿ ಇಳಿಕೆಯಾಗಿದೆ.

ನಾವು 2019ರಿಂದ ಅಟ್ಟಪಾಡಿಯ 19 ಹಳ್ಳಿಗಳಲ್ಲಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ 'ಕೃಷಿಪರಿಸರದ ಮೂಲಕ ಪೌಷ್ಟಿಕಾಂಶ ಸಮರ್ಪಕತೆ'ಯ ಮೇಲೆ ಕೆಲಸ ಮಾಡುತ್ತಿದ್ದೇವೆ.  ಈ ಯೋಜನೆಯು ಅವರ ಸಾಂಪ್ರದಾಯಿಕ ಕೃಷಿ ಪದ್ಧತಿ ಪಂಚಕೃಷಿಯನ್ನು ಹಾಗೂ ಅವರ ಸಿರಿಧಾನ್ಯ ಆಧಾರಿತ ಆಹಾರ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಗುರಿಯನ್ನು ಹೊಂದಿತ್ತು. ಇದನ್ನು ಆರಂಭಿಸಿದಾಗ ಹಿರಿಯರಲ್ಲಿ ಉತ್ಸಾಹವಿತ್ತು. ಹಲವಾರು ಶಿಕ್ಷಿತ ಯುವಸಮುದಾಯದವರು ಸರಿಯಾದ ಕೆಲಸವಿಲ್ಲದೆ ಇದ್ದದ್ದರಿಂದ ಈ ಯೋಜನೆಯಲ್ಲಿ ತೊಡಗಿಸಿಕೊಂಡರು. ಅವರಲ್ಲಿ ಕೆಲವರು ಒಟ್ಟಾಗಿ ಪಂಚಕೃಷಿ ಹಾಗೂ ಕೃಷಿಪರಿಸರ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಆರಂಭಿಸಿದರು. ದೇಸಿ ಬೀಜಗಳು ಮತ್ತು ಪದ್ಧತಿಗಳನ್ನು ಆ ಸಮುದಾಯದ ಹಿರಿಯರ ನೆರವಿನೊಂದಿಗೆ ಸಂರಕ್ಷಿಸಲು ಈ ಯೋಜನೆಯನ್ನು ಆರಂಭಿಸಲಾಯಿತು. ಇದಕ್ಕೆ 'ವೇದೆ ವ್ಯಾಲೆ' ಅಂದರೆ ಬೀಜಗಳ ಬುಟ್ಟಿ ಎಂದು ಹೆಸರಿಡಲಾಯಿತು.

ಆಂಧ್ರಪ್ರದೇಶದಲ್ಲಿ ಸಮುದಾಯ ನಿರ್ವಹಿಸುವ ನೈಸರ್ಗಿಕ ಕೃಷಿಯ ಕುರಿತು ನಮ್ಮಿಂದ ತಿಳಿದಾಗ ಅದನ್ನು ಪ್ರಯತ್ನಿಸಲು ಮುಂದಾದರು. ಹಲವು ರೈತರು ಈ ಪ್ರಯೋಗಕ್ಕೆ ಸಹಕಾರ ನೀಡಿದರು. ಎಲ್ಲವೂ ಕೋವಿಡ್ 19ರಿಂದಾಗಿ ಸ್ಥಗಿತವಾಯಿತು. ಮೊದಲನೆಯ ಬಾರಿ ಲಾಕ್‌ಡೌನ್ ಆದಾಗ ತಂಡದ ಸದಸ್ಯರೊಂದಿಗೆ ನಿರಂತರ ಸಂವಾದ ನಡೆಸಲಾಯಿತು. ಲಾಕ್‌ಡೌನ್ ಮುಗಿದಾಗ ಪ್ರಾಜೆಕ್ಟ್ ಫುಡ್ ಸ್ಕೇಪ್ ಯೋಜನೆಯನ್ನು ಆರಂಭಿಸಲಾಯಿತು.  ಇದನ್ನು ದೇಸಿಯ ಆಹಾರ ಮತ್ತು ಕೃಷಿಯ ಮಹತ್ವ ಅರಿತ ಯುವಕರು ಮತ್ತು ಹಿರಿಯರಿಗೆ ನೆರವು ನೀಡಲು ಆರಂಭಿಸಲಾಯಿತು. ಅವರಲ್ಲಿ ಉತ್ಸಾಹ, ಮಾನವ ಸಂಪನ್ಮೂಲವಿತ್ತು ಆದರೆ ಆರ್ಥಿಕ ಸಂಪನ್ಮೂಲವಿರಲಿಲ್ಲ. ಪ್ರತಿ ಎಕರೆಗೆ ರೂ.5000ವನ್ನು ಮುಂಗಡವಾಗಿ ಪಡೆಯಬಯಸಿದರು. ಪ್ರಾಜೆಕ್ಟ್ ಫುಡ್ ಸ್ಕೇಪ್ ಮೂಲಕ ಥನಾಲ್ ಹಣವನ್ನು ಸಂಗ್ರಹಿಸಿತು. ಹಲವಾರು ಸ್ನೇಹಿತರು ಮತ್ತು ಗ್ರಾಹಕರು ತಾವಾಗೇ ಸಂಪನ್ಮೂಲಗಳನ್ನು ಒದಗಿಸಲು ಮುಂದೆಬಂದರು. ನಾವು ಹಣವನ್ನು ಆಹಾರ ಧಾನ್ಯಗಳು, ಬೇಳೆಕಾಳುಗಳು ಮತ್ತು ತರಕಾರಿಗಳ ಮೂಲಕ ಹಿಂತಿರುಗಿಸಲು ಉದ್ದೇಶಿಸಿದೆವು. ಹಲವರು ನಮ್ಮಿಂದ ಏನನ್ನೂ ತೆಗೆದುಕೊಳ್ಳಲು ಬಯಸಲಿಲ್ಲ.

ರೈತರು ತಮ್ಮ ಭೂಮಿಯನ್ನು ಉತ್ತು ಬೀಜ ಬಿತ್ತಿದರು. ನಮ್ಮ ಯುವ ತಂಡವು ಈ ಯೋಜನೆಯೊಂದಿಗೆ ಕೈಜೋಡಿಸಿತು. ಅವರು ಸ್ವಲ್ಪ ಭೂಮಿಯನ್ನು ವಾಯಿದೆಗೆ ತೊಗೊಂಡು ಸಾವಯವ ತರಕಾರಿ ಕೃಷಿಯನ್ನು ರೈತರ ನೆರವಿನೊಂದಿಗೆ ಆರಂಭಿಸಿದರು. ಯುವ ತಂಡಕ್ಕೆ ನೈಸರ್ಗಿಕ ಕೃಷಿ, ಕೃಷಿ ಪರಿಸರ ಪದ್ಧತಿಗಳಲ್ಲಿ ತರಬೇತಿ ನೀಡಿದವು. ಅದರಲ್ಲೂ ಕೀಟ, ರೋಗ ನಿರ್ವಹಣೆ ಮತ್ತು ಜೈವಿಕ ಗೊಬ್ಬರ ತಯಾರಿಕೆಯನ್ನು 6 ತರಗತಿಗಳಲ್ಲಿ ಕಲಿಸಲಾಯಿತು. ಇತರ ಸಂಸ್ಥೆಗಳು ನೈಸರ್ಗಿಕ ಕೃಷಿಯ ಕುರಿತು ನಡೆಸುವ ಆನ್‌ಲೈನ್ ಕೋರ್ಸುಗಳಲ್ಲೂ ಭಾಗವಹಿಸುವಂತೆ ಅವರಿಗೆ ಉತ್ತೇಜನ ನೀಡಿದೆವು.

**ಥನಾಲ್ ಕಡೆಯಿಂದ ಸಾವಯವ ತರಕಾರಿ ಕೃಷಿಯ ಆರಂಭ**

ನಾವು 2021ರಲ್ಲಿ ತಿರುವನಂತಪುರದ ಎರಡು ಪಂಚಾಯತ್‌ಗಳ ರೈತರೊಂದಿಗೆ ಕೆಲಸ ಮಾಡಲಾರಂಭಿಸಿದೆವು. ಕೋವಲಂನ ಮಹಿಳಾ ಕೃಷಿಕರೊಂದಿಗೆ ಸಾವಯವ ಕೃಷಿಯ ಯೋಜನೆಯನ್ನು ಆರಂಭಿಸಲಾಯಿತು. ಕೇರಳವು ಕೀಟನಾಶಕಗಳಿಂದಾಗಿ ಸಾಲದಲ್ಲಿ ಸಿಲುಕಿತ್ತು. ಅದರಲ್ಲೂ ಎಂಡೋಸಲ್ಫಾನ್ ಕೀಟನಾಶಕದ ಕುರಿತು ಮಾಹಿತಿಯನ್ನು ನೀಡುವಲ್ಲಿ ಥನಾಲ್ ಮುಖ್ಯಪಾತ್ರ ವಹಿಸಿತು. ಈ ಯೋಜನೆಯ ಉದ್ದೇಶ ರಾಸಾಯನಿಕ ಕೀಟನಾಶಕಗಳಿಲ್ಲದೆ ಕೃಷಿ ಸಾಧ್ಯ ಎನ್ನುವುದನ್ನು ತೋರಿಸುವುದಾಗಿತ್ತು. ಕೇರಳದಲ್ಲಿ ಆಹಾರ ಉತ್ಪಾದನೆ ಹಾಗೂ ಸ್ವಾವಲಂಬನೆಗೆ ದೊಡ್ಡ ಅಡ್ಡಿ ಇಲ್ಲಿ ಹೆಚ್ಚು ಸಣ್ಣರೈತರು ಹೆಚ್ಚು ಎನ್ನುವುದು ವಿಜ್ಞಾನಿಗಳು ಸೇರಿದಂತೆ ಹಲವರ ಅಭಿಮತವಾಗಿತ್ತು. ನಮ್ಮ ಯೋಜನೆಯಲ್ಲಿ ಈ ಅಂಶವನ್ನು ಮುಖ್ಯವಾಗಿ ಪರಿಗಣಿಸಿ ಸಣ್ಣಹಿಡುವಳಿದಾರರು, ಸಣ್ಣ ರೈತರು ಹೇಗೆ ಸಾಕಷ್ಟು ತರಕಾರಿ ಉತ್ಪಾದನೆ ಮಾಡಬಹುದು ಎನ್ನುವುದಕ್ಕೆ ಒತ್ತು ಕೊಡಲಾಯಿತು. ಕೇರಳದ ಮಣ್ಣು ಮತ್ತು ಹವಾಮಾನವು ತರಕಾರಿ ಹಾಗೂ ಹಣ್ಣಿನ ಕೃಷಿಗೆ ಸೂಕ್ತವಾಗಿದೆ. ಮೂರು ಮಹಿಳಾ ಸ್ವಸಹಾಯ ಗುಂಪುಗಳೊಂದಿಗೆ ನಾವು ಕೆಲಸ ಆರಂಭಿಸಿದೆವು. ಅವರ ಬಳಿ ಹೆಚ್ಚು ಭೂಮಿಯಿರಲಿಲ್ಲ. ವರ್ಷದೊಳಗೆ ಯಶಸ್ಸು ಸಿಕ್ಕಿತು. ಪಂಚಾಯ್ತಿಯ ಮಂದಿ ನಮ್ಮನ್ನು ಸಾವಯವ ತರಕಾರಿ ಮತ್ತು ಬಾಳೆ ಕೃಷಿಗೆ ಸಹಾಯ ಮಾಡಲು ಕೋರಿದರು. ನಂತರ ಥನಾಲ್‌ನಲ್ಲಿ ರಾಜ್ಯ ಸರ್ಕಾರದೊಂದಿಗೆ ಕೆಲಸ ಮಾಡುತ್ತಾ ರಾಜ್ಯ ಸರ್ಕಾರವು ಸಾವಯವ ಕೃಷಿ ನೀತಿ ರೂಪಿಸಲು ಸಹಕಾರಿಯಾಯಿತು.

ಪಥನಮತ್ತಟ್ಟ ಜಿಲ್ಲೆಯಲ್ಲಿನ ಮತ್ತೊಂದು ಬುಡಕಟ್ಟು ಸಮುದಾಯದವರು ಕೋವಿಡ್ ಕಾರಣದಿಂದ ಊರಿನಲ್ಲಿ ಹೆಚ್ಚು ಕೆಲಸವಿರಲಿಲ್ಲ. ಅಲ್ಲದೆ ಕೆಲಸಕ್ಕಾಗಿ ಬೇರೆಡೆಗೆ ಹೋಗಲು ಸಾಧ್ಯವಿರಲಿಲ್ಲ. ಸುಮಾರು 480 ಮಂದಿಗೆ 13 ಬಗೆಯ ವಿವಿಧ ತರಕಾರಿ ಬೀಜಗಳನ್ನು, ಜೈವಿಕ ಒಳಸುರಿಯುವಿಕೆಗಳನ್ನು ನೀಡಿ ಸಾವಯವ ತರಕಾರಿ ಕೃಷಿ ಮಾಡುವ ವಿಧಾನದ ಕುರಿತು ಮಾರ್ಗದರ್ಶನ ನೀಡಲಾಯಿತು. ಮಳೆ ಹೆಚ್ಚಾದದ್ದರಿಂದ ಹಲವರಿಗೆ ಕೆಲಸ ಆರಂಭಿಸಲು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯ ನಡುವೆಯೇ ಈ ಗುಂಪಿನ ಆಯ್ದ ಮಂದಿಗೆ ತರಬೇತಿ ನೀಡಲು ನಾವು ಯೋಜಿಸಿದೆವು.

## ಸಮುದಾಯ ಅಡುಗೆಮನೆಗಳು

ಸ್ಥಳೀಯ ಆಹಾರ ಉತ್ಪಾದನೆಯ ಮಹತ್ವವನ್ನು ಅರಿತ ಕೇರಳದ ಪಂಚಾಯತ್‌ಗಳು ಲಾಕ್‌ಡೌನ್ ಸಮಯದಲ್ಲಿ ಸಮುದಾಯ ಅಡುಗೆಮನೆಗಳನ್ನು ಆರಂಭಿಸಿದವು. ನಾವು ತಿರುವನಂತಪುರದಲ್ಲಿನ ಕರಕುಳಂ ಪಂಚಾಯತ್ ಜೊತೆಗೆ ಕೆಲಸ ಮಾಡಲು ಆರಂಭಿಸಿದೆವು. ಇದು ನಗರದ ಹತ್ತಿರವೇ ಇದ್ದರೂ ಇಲ್ಲಿ ಸಣ್ಣ ಮತ್ತು ಮಧ್ಯಮ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪಂಚಾಯತ್ ನಮ್ಮೊಂದಿಗೆ ಕೆಲಸ ಮಾಡಲು ಉತ್ಸುಕರಾಗಿದ್ದರು.

ಸುಮಾರು 130 ಕೃಷಿಕರಲ್ಲಿ ಹಲವರು ಮಹಿಳೆಯರು. ಅವರಿಗೆ ವಿವಿಧ ತರಕಾರಿ ಬೀಜಗಳು ಮತ್ತು ಮಣ್ಣಿನ ಗುಣಮಟ್ಟ ಹೆಚ್ಚಿಸಲು ಜೈವಿಕ ಒಳಸುರಿಯುವಿಕೆಗಳನ್ನು ನೀಡಲಾಯಿತು. ಆಯ್ದ ಕೆಲವು ರೈತರಿಗೆ ಸಾವಯವ ತರಕಾರಿ ಕೃಷಿಯಲ್ಲಿ ಎರಡು ತರಬೇತಿಗಳನ್ನು

ನೀಡಲಾಯಿತು. ಕಳೆದ ತಿಂಗಳು ಲಾಕ್‌ಡೌನ್ ಕಾರಣದಿಂದಾಗಿ ಸರ್ಕಾರವು ಓಡಾಟಕ್ಕೆ ನಿರ್ಬಂಧ ಹೇರಿದ್ದರಿಂದ ನಮ್ಮಿಂದ ಬೀಜ ಪಡೆದುಕೊಂಡು ತರಬೇತಿ ನೊಂದಾಯಿಸಿದ್ದ ಎಲ್ಲ ರೈತರನ್ನು ತಲುಪಲು ಸಾಧ್ಯವಾಗಲಿಲ್ಲ. ಅವರು ಕೃಷಿಯನ್ನು ಆರಂಭಿಸಿದ್ದರು. ನಾವು ಈ ಪಂಚಾಯತ್‌ನಲ್ಲಿ ಮೊಬೈಲ್ ಆರ್ಗಾನಿಕ್ ಆಗ್ರೋ ಕ್ಲಿನಿಕ್ ಸರ್ವೀಸ್ ನೀಡಲು ತೀರ್ಮಾನಿಸಿದೆವು.

## ನನ್ನ ಆಹಾರ ಉದ್ಯಾನ ಸವಾಲು

ಈ ಪಿಡುಗಿನಿಂದ ನಮ್ಮ ತಂಡಕ್ಕೆ ಹಾಗೂ ನಮ್ಮೊಂದಿಗೆ ಕೈಜೋಡಿಸಿದ್ದ ರೈತರಿಗೆ ಸಾಕಷ್ಟು ತೊಂದರೆಯಾಯಿತು. ಓಡಾಟಕ್ಕೆ ನಿರ್ಬಂಧ ಹೇರಿದ್ದರಿಂದ ಕೆಲವು ಕೆಲಸಗಳನ್ನು ಮುಗಿಸಲಾಗಲಿಲ್ಲ, ರೈತರನ್ನು ಭೇಟಿಯಾಗಲು, ದಾಖಲಿಸಲು ಸಾಧ್ಯವಾಗಲಿಲ್ಲ ಇತ್ಯಾದಿ. ಅವರ ಪರಿಣಿತಿಯನ್ನು ಬಳಸಿಕೊಂಡು ಸಾವಯವ ಕೃಷಿಯಲ್ಲಿ 'ನನ್ನ ಆಹಾರ ಉದ್ಯಾನ ಸವಾಲು' ಕಾರ್ಯಕ್ರಮವನ್ನು ಆರಂಭಿಸಿ ಅವರೆಲ್ಲರನ್ನೂ ಕೃಷಿಯಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳುವಂತೆ ಮಾಡಲಾಯಿತು. ನಾವೊಂದು ವಾಟ್ಸಾಪ್ ಗುಂಪನ್ನು ನಿರ್ಮಿಸಿ ಅದರಲ್ಲಿ ಕೃಷಿ ಕುರಿತಾದ ಚಿತ್ರಗಳನ್ನು ಹಂಚಿಕೊಳ್ಳಲಾಯಿತು. ಕೀಟಗಳ ನಿರ್ವಹಣೆ, ಮಣ್ಣಿನ ನಿರ್ವಹಣೆ, ಜಾಗದ ಸಮಸ್ಯೆ ಇತ್ಯಾದಿ ಸಂಗತಿಗಳ ಕುರಿತು ತಿಳಿಸಲಾಯಿತು. ಎಲ್ಲರೂ ತಮ್ಮ ಯಶಸ್ಸು ಹಾಗೂ ಆಸೆಯ ಕತೆಗಳನ್ನು ಹಂಚಿಕೊಂಡಿದ್ದರಿಂದ ಗುಂಪು ಹೆಚ್ಚು ಆಸಕ್ತಿಯುತ ಹಾಗೂ ಅರ್ಥಪೂರ್ಣವಾಯಿತು. ಇಲ್ಲಿ ಕೆಲವು ಉದಾಹರಣೆಗಳನ್ನು ನೀಡಲಾಗಿದೆ.

"12 ವರ್ಷಗಳ ಹಿಂದೆ ನಾನು ಥನಾಲ್ ಸೇರಿಕೊಳ್ಳುವ ಮೂಲಕ ಸಾವಯವ ತರಕಾರಿ ಉದ್ಯಾನ ಕುರಿತ ಆಸಕ್ತಿ ಹೆಚ್ಚಿತು. ನಾನು ಹೊಸ ಜಾಗಕ್ಕೆ ಹೋದೆ ಅಲ್ಲಿಯೂ ಮನೆಯ ಛಾವಣಿಯ ಮೇಲೆ ತರಕಾರಿಗಳನ್ನು ಬೆಳೆಯಲಾರಂಭಿಸಿದೆ. ಥನಾಲ್ ಇಂದ ಪಡೆದಿದ್ದ ಕೆಲವು ಗ್ರೋಬ್ಯಾಗುಗಳು ಮತ್ತು ಬೀಜಗಳನ್ನು ನೆರೆಹೊರೆಯವರೊಂದಿಗೆ ಹಂಚಿಕೊಂಡೆ. ತರಕಾರಿಗಳನ್ನು ಬೆಳೆಯಲು ಅವರನ್ನು ಪ್ರೋತ್ಸಾಹಿಸಿದೆ. ಬೆಂಡೆಕಾಯಿ, ಮೆಣಸಿನಕಾಯಿ, ಬದನೆ, ಸೋರೆಕಾಯಿ ಇತ್ಯಾದಿಗಳನ್ನು ಬೆಳೆಸಿದೆ. ನಾವು ಬೀಜಗಳು, ಸಸಿಗಳು, ಫಸಲನ್ನು ಹಂಚಿಕೊಂಡು ಒಬ್ಬರಿಗೊಬ್ಬರು ಹತ್ತಿರವಾದೆವು. ಹಿಂದಿನ ಕೃಷಿಯ ಅನುಭವದಿಂದ ಹಾಗೂ ಥನಾಲ್‌ನ ಕಾರ್ಯಕ್ರಮ ಅಧಿಕಾರಿ ಅರುಣನ ಸಲಹೆಯಂತೆ ಜೈವಿಕ ಕೀಟ ನಿರ್ವಹಣೆ, ಜೈವಿಕ ಗೊಬ್ಬರಗಳ ಕುರಿತು ಸಲಹೆ ನೀಡಲು ಸಾಧ್ಯವಾಯಿತು. ಈಗ ಥನಾಲ್ ಮೊಬೈಲ್ ಅಗ್ರಿ ಕ್ಲಿನಿಕ್ ತಂಡದಿಂದ ನಮ್ಮ ಸಮುದಾಯದಲ್ಲಿ ಕೃಷಿ ತಂಡವನ್ನು ರೂಪಿಸಿಕೊಂಡು ತರಬೇತಿ ಕೊಡಿಸುವ ಕುರಿತು ಯೋಜಿಸುತ್ತಿದ್ದೇನೆ. ಈ ಪಿಡುಗು ಕೊನೆಯಾಗಿ ಪರಿಸ್ಥಿತಿ ಬದಲಾಗುವುದಕ್ಕೆ ಕಾಯುತ್ತಿದ್ದೇನೆ. ಆಗ ನಮ್ಮ ಕೃಷಿ ಸಮುದಾಯಕ್ಕೆ ಇನ್ನಷ್ಟು ಜನರನ್ನು ಸೇರಿಸಿಕೊಂಡು ಸ್ವಾವಲಂಬಿಗಳಾಗಬಹುದು" ಎಂದು ಕೋವಲಂ ಹತ್ತಿರದ ವೆಲ್ಲಾರಿನ ಪ್ರಮೀಳ ಹೇಳಿದರು.

ಆರ್ಗಾನಿಕ್ ಬಜಾರ್‌ನ ಮ್ಯಾನೇಜರ್ ದೀಪಕ್ "ನಾವು ಏಳು ಮಂದಿ ಸೇರಿ ಸಾವಯವ ಕೃಷಿಕರಾದ ನಮ್ಮ ಸ್ನೇಹಿತರೊಬ್ಬರಿಂದ 1.5 ಎಕರೆ ಭೂಮಿಯನ್ನು ವಾಯಿದೆಗೆ ಪಡೆದುಕೊಂಡೆವು. ಅಲ್ಲಿ "ವೆನಾಡ್ ಆರ್ಗಾನಿಕ್ ಫಾರಂ" ಶುರುಮಾಡಿದೆವು. ಬಾಳೆ, ಶುಂಠಿ, ಅರಿಶಿಣ, ಸುವರ್ಣಗಡ್ಡೆ, ಕೆಸುವಿನ ಗಡ್ಡೆ, ಗೆಣಸು, ತರಕಾರಿಗಳಾದ ಟೊಮೊಟೊ, ಮೆಣಸಿನ ಕಾಯಿ, ಬದನೆ, ಹಾಗಲಕಾಯಿ, ಸೋರೆಕಾಯಿ, ಕುಂಬಳ ಕಾಯಿಯನ್ನು ಬೆಳೆದೆವು. ಒಳಸುರಿಯುವಿಕೆಗಳ ಮೇಲೆ ಯಾವುದೇ ಖರ್ಚನ್ನು ಮಾಡದೆ ಸ್ವಾವಲಂಬನೆಯನ್ನು ಸಾಧಿಸಲು ಎಲ್ಲ ಕೃಷಿ ಕೆಲಸಗಳನ್ನು ನಾವೇ ಮಾಡಿದೆವು. ಮನೆಯಲ್ಲೇ ಬೀಜಗಳನ್ನು ಬಿತ್ತಿ ಸಸಿಗಳನ್ನು ಬೆಳೆಸಿಕೊಂಡೆವು. ಗೊಬ್ಬರ, ಕೀಟನಾಶಕಗಳನ್ನು ತಯಾರಿಸಿದೆವು. ಪಾಟಿಂಗ್ ಮಣ್ಣು ಸಿದ್ಧಪಡಿಸಿದೆವು. ಹೊಂಡದಲ್ಲಿ ಮೀನುಗಳನ್ನು ಬೆಳೆಸಿದೆವು. ಈ ಹೊಂಡದ ನೀರನ್ನು ಬದಲಿಸುವಾಗ ಅದನ್ನು ಕಾಲುವೆಗಳ ಮೂಲಕ ಗಿಡಗಳಿಗೆ ಹಾಯಿಸಲಾಯಿತು. ಈ ನೀರು ಗಿಡಗಳಿಗೆ ಗೊಬ್ಬರವಾಯಿತು. ಅಂತರಬೆಳೆ ಪದ್ಧತಿಯಂತೆ ಬಾಳೆಯ ನಡುವೆ ಸುವರ್ಣಗಡ್ಡೆ, ಕೆಸುವಿನ ಗಡ್ಡೆ, ಬದನೆ ಮತ್ತು ಸೌತೆಕಾಯಿ ಬೆಳೆಸಲಾಯಿತು. ಕೀಟ ನಿಯಂತ್ರಣ ಗುಣಗಳನ್ನು ಹೊಂದಿರುವ ಅರಿಶಿಣ ಮತ್ತು ಶುಂಠಿಯನ್ನು ಇವುಗಳ ನಡುವೆ ಬೆಳೆಸಲಾಯಿತು. ಗಿಡಗಳ ಪಾತಿಗೆ ಹೊದಿಕೆ ಹೊದಿಸುವ ಪ್ರಾಮುಖ್ಯತೆಯ ಅರಿವಿದ್ದರಿಂದ ಸೆಣಬಿನ ಚೀಲಗಳು ಹಾಗೂ ಒಣಗಿದ ಎಲೆಗಳನ್ನು ಗಿಡದ ಪಾತಿಗಳಿಗೆ ಹಾಕಲಾಯಿತು. ನಮ್ಮ ಗುರಿ ಆರ್ಗಾನಿಕ್ ಬಜಾರಿನಲ್ಲಿ ಅಭಾವವಿದ್ದ ಬಾಳೆಹಣ್ಣು ಮತ್ತಿತರ ತರಕಾರಿಗಳನ್ನು ಬೆಳೆಯುವುದಾಗಿತ್ತು. ನಾವು ತಯಾರಿಸಿದ ಪಾಟಿಂಗ್ ಮಿಕ್ಸ್ಚರ್ ಅನ್ನು ಮಾರಾಟಮಾಡಿದೆವು. ಇದರಿಂದ ನಮ್ಮ ಖರ್ಚನ್ನು ಸ್ವಲ್ಪ ಮಟ್ಟಿಗೆ ವಾಪಸ್ ಪಡೆಯಲು ಸಾಧ್ಯವಾಯಿತು. ನಾವೆಲ್ಲರೂ ಪ್ರತಿದಿನ ಬೆಳಿಗ್ಗೆ ಕನಿಷ್ಠ ಮೂರು ಗಂಟೆ ತೋಟದಲ್ಲಿ ಕೆಲಸ ಮಾಡಿದೆವು. ನಾವೆಲ್ಲವರೂ ಬಹಳ ವರ್ಷಗಳಿಂದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರೂ ಕೂಡ ಮುಂಜಾನೆ ಪ್ರಕೃತಿಯ ನಡುವೆ ಕೆಲಸ ಮಾಡುವುದು ಇಡಿ ದಿನ ಚಟುವಟಿಕೆಯಿಂದ ಉಲ್ಲಸಿತವಾಗಿರುವಂತೆ ಮಾಡುತ್ತಿತ್ತು. ನಮ್ಮ ಆರೋಗ್ಯವು ಕೂಡ ಬಹಳಷ್ಟು ಸುಧಾರಿಸಿತು".

ಕೇರಳದಲ್ಲಿ ಪ್ರತಿರೋಧಕ ಶಕ್ತಿಯನ್ನು ಬೆಳೆಸುವುದು ಸ್ವಾಗತಾರ್ಹ ಬೆಳವಣಿಗೆಯಾಗಿತ್ತು. ಪೌಷ್ಟಿಕಾಂಶಯುಕ್ತ ಆಹಾರವನ್ನು ಅದರಲ್ಲೂ ಹಣ್ಣು, ತರಕಾರಿಗಳನ್ನು ಸೇವಿಸುವುದು ಆರೋಗ್ಯವಂತ ಜೀವನಕ್ಕೆ ಅತ್ಯಗತ್ಯ. ಕೇರಳದ ಭೂಪ್ರದೇಶ, ಮಣ್ಣು ಹಣ್ಣು, ತರಕಾರಿ ಕೃಷಿಗೆ ಸೂಕ್ತವಾದದ್ದು. ಕೃಷಿ ಇಲಾಖೆಯು ರಾಜ್ಯದಲ್ಲಿನ ಸುಮಾರು 1 ಲಕ್ಷ ಹೆಕ್ಟೇರ್ ಭೂಮಿಯನ್ನು ಗುರುತಿಸಿತು. ಇದನ್ನು ಆಹಾರ ಉತ್ಪಾದನಾ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಬಹುದು. ಹಲವು ಸುಶಿಕ್ಷಿತ ಯುವಸಮುದಾಯದವರು 'ನನ್ನ ಆಹಾರ ನನ್ನ ಜವಾಬ್ದಾರಿ' ಎಂದು ಮುಂದೆಬರುತ್ತಿರುವುದನ್ನು ನೋಡಿದರೆ ಆಶಾಭಾವ ಮೂಡುತ್ತಿದೆ.

◆

**Usha S**
Thanal, OD- 3,
Jawahar Nagar, Kowdiar P.O
Thiruvananthapuram, Kerala-695003.
E-mail: ushathanal@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 3, ಸೆಪ್ಟಂಬರ್ 2020.

# ಪುನರುತ್ಪಾದಕ ಕೃಷಿವಿಜ್ಞಾನದ ಸಲಕರಣೆಯಾಗಿ ತಂತ್ರಜ್ಞಾನದ ಬಳಕೆ

**ಉಷಾ ದೇವಿ ವೆಂಕಟಾಚಲಂ**

**ಸಾಂಪ್ರದಾಯಿಕ ಡಿಜಿಟಲ್ ಮಾರುಕಟ್ಟೆಯ ವೇದಿಕೆಗಳು ಕೇವಲ ಬಳಕೆಗಷ್ಟೆ ಗಮನ ನೀಡುತ್ತವೆ. ತಮಿಳುನಾಡಿನ ಕೃಷಿಜನನಿ ಎನ್ನುವ ವೇದಿಕೆಯು ವಿಕೇಂದ್ರಿಕರಣ ಮತ್ತು ಪುನರುತ್ಪಾದನೆಗೆ ಒತ್ತು ನೀಡುವ ಬದಲಿ ಮಾದರಿಯಾಗಿದೆ. ಜನನಿ ಗ್ರೋ ಮೊಬೈಲ್ ತಂತ್ರಾಂಶವು ಸಣ್ಣ ರೈತರಿಗೆ ಪುನರುತ್ಪಾದನ ಪದ್ಧತಿಗಳ ಕುರಿತು ತಿಳಿಸಿಕೊಡುತ್ತದೆ. ಜೊತೆಗೆ ಇದು ಅವರ ಉತ್ಪನ್ನಗಳಿಗೆ ಉತ್ತಮ ಬೆಲೆ ತಂದುಕೊಡುವ ಸಾವಯವ ಮಾರುಕಟ್ಟೆಯನ್ನು ಒದಗಿಸುತ್ತದೆ.**

ಕೃಷಿಜನನಿ ಎನ್ನುವುದು ಅಗ್ರಿಟೆಕ್‌ನವರ ಸೋಶಿಯಲ್ ಎಂಟರ್‌ಪ್ರೈಸ್. ಇದು ತಮಿಳುನಾಡಿನ ತಿರಪ್ಪೂರು ಜಿಲ್ಲೆಯ ಕರ್ಯೆಪಾಳ್ಯಂನಲ್ಲಿ ಐದು ವರ್ಷಗಳ ಹಿಂದೆ ಆರಂಭವಾಯಿತು. ಇದರ ಉದ್ದೇಶ ಪುನರುತ್ಪಾದಕ ಕೃಷಿವಿಜ್ಞಾನದ ಸೃಷ್ಟಿ. ಆ ಮೂಲಕ ರೈತರು, ಗ್ರಾಹಕರು, ಕಂಪನಿಗಳು ಮತ್ತು ಭೂಮಿಯನ್ನು ಕಾಪಾಡುವುದು.

ಆರಂಭದಲ್ಲಿ ಇದು ಪ್ರಯೋಗವಾಗಿತ್ತು. ನಮ್ಮ ಉದ್ದೇಶ ಭೂಮಿಯಿಂದ ಆದಷ್ಟು ಕಲಿಯುವುದು, ಕೃಷಿ ಸಮುದಾಯಗಳ ವಿಶ್ವಾಸ ಗಳಿಸುವುದು ಮತ್ತು ರೈತರಿಗೆ ತಂತ್ರಜ್ಞಾನದಿಂದ ಸಾಧ್ಯವಾದಷ್ಟು ನೆರವು ಒದಗಿಸುವುದು. ಪ್ರಯೋಗದ ಹಂತದಲ್ಲಿ ನಾವು ಎರಡು ಜಿಲ್ಲೆಗಳ ರೈತರ ನಡುವೆ ಸಂಪರ್ಕ ಸಾಧಿಸಲು ಗಮನಕೇಂದ್ರೀಕರಿಸಿದೆವು. ಅವರ ಕೃಷಿ ಪದ್ಧತಿಗಳ ಕುರಿತು ತಿಳಿದುಕೊಂಡು ಅವರ ಅಗತ್ಯಗಳಿಗನುಗುಣವಾಗಿ ಅವರನ್ನು ಕೊಳ್ಳುವ ಗುಂಪುಗಳಾಗಿ ವಿಂಗಡಿಸಿದೆವು. ಕೃಷಿಜನನಿಯು ಒಳಸುರಿಯುವಿಕೆಗಳನ್ನು ದೊಡ್ಡಪ್ರಮಾಣದಲ್ಲಿ ಕೊಂಡು ಅದನ್ನು ನಮ್ಮ ಸಂಪರ್ಕಜಾಲದಲ್ಲಿನ ರೈತರೊಂದಿಗೆ ಹಂಚಿಕೊಳ್ಳುತ್ತಿತ್ತು. ಈ ಪ್ರಯೋಗವು ಹಲವು ಸೋಲು,ಗೆಲವು ಮತ್ತು ಕಲಿಕೆಗಳ ಮಿಶ್ರಣವಾಯಿತು. ಈ ಸಮಯದಲ್ಲಿಯೇ ತಂತ್ರಜ್ಞಾನವು ಪುನರುತ್ಪಾದಕ ಕೃಷಿವಿಜ್ಞಾನದ ಮೂಲಕ ಕೃಷಿಬಿಕ್ಕಟ್ಟುಗಳನ್ನು ಪರಿಹರಿಸಲು ಸಾಧ್ಯವೇ ಎನ್ನುವ ಕುರಿತು ಪ್ರಯೋಗಶೀಲರಾಗಿದ್ದೆವು.

ಈ ಅವಧಿಯಲ್ಲಿನ ಕಲಿಕೆಯು ನಮ್ಮ ಮುಂದಿನ ಹಂತದ ಪಯಣಕ್ಕೆ ನೆರವಾಯಿತು. ತಂತ್ರಜ್ಞಾನವನ್ನು ಬಳಸಿಕೊಂಡ ತಮಿಳುನಾಡಿನಾದ್ಯಂತದ ಬೆಳವಣಿಗೆಗೆ ಕಾರಣವಾಯಿತು. ಈ ಹಂತದಲ್ಲಿ ಜನನಿಯು ಲಾಭತಂದುಕೊಡುವ ಪುನರುತ್ಪಾದಕ ಕೃಷಿವಿಜ್ಞಾನದ ವೇದಿಕೆಯಾಯಿತು. ಇದೊಂದು ತಂತ್ರಜ್ಞಾನ ವೇದಿಕೆಯಾಗಿದ್ದು ತಮಿಳುನಾಡಿನ ಸಣ್ಣ ರೈತರಿಗೆ ಪರಿವರ್ತನಾ ಕೃಷಿಯನ್ನು ಅಭ್ಯಸಿಸಲು ಹಾಗೂ ತಯಾರಿಕರಿಗೆ ಉತ್ತಮ ಸಾವಯವ ಬೆಳೆ ಹಾಗೂ ಉತ್ಪನ್ನಗಳನ್ನು ಹುಡುಕಿಕೊಳ್ಳಲು ವೇದಿಕೆಯಾಗಿದೆ. ಒಂದು ಕಡೆ ಜನನಿ ಗ್ರೋ ಮೊಬೈಲ್ ತಂತ್ರಾಂಶವು ಸಣ್ಣರೈತರಿಗೆ ಪುನರುತ್ಪಾದಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಮಾಡಿದೆ. ಜೊತೆಗೆ ಅವರ ಉತ್ಪನ್ನಗಳ ಉತ್ತಮ ಬೆಲೆ ತಂದುಕೊಡುವ ಸಾವಯವ ಮಾರುಕಟ್ಟೆಯನ್ನು ಒದಗಿಸಿದೆ. ಮತ್ತೊಂದೆಡೆ ಜನನಿ ಮಾರುಕಟ್ಟೆ ಪೋರ್ಟಲ್ ಸಗಟು ವ್ಯಾಪಾರಿಗಳು, ವಿಶೇಷ ತಯಾರಕರು ಮತ್ತು ಹೊಸದಾಗಿ ಉದ್ಯಮ ಆರಂಭಿಸುವವರಿಗೆ ಉತ್ತಮವಾದ ಪ್ರಮಾಣೀಕೃತ ಸಾವಯವ ಉತ್ಪನ್ನಗಳನ್ನು ನೂರಾರು ಸಣ್ಣ ರೈತರ ಮೂಲಕ ಕೊಳ್ಳಲು ನೆರವಾಗುತ್ತದೆ.

ಎಲ್ಲ ಆರಂಭಿಕ ಉದ್ದಿಮೆಗಳಂತೆ ನಾವು ಕೂಡ ತಂತ್ರಜ್ಞಾನದೊಂದಿಗೆ ರೈತರಿಗೆ ನೆರವಾಗಲು ನಿಧಾನವಾಗಿ ಒಂದೊಂದೇ ಹೆಜ್ಜೆ ಇಟ್ಟೆವು. ನಮ್ಮ ಗುರಿ ತಲುಪಲು ಒಂದು ಸಲಕ್ಕೆ ಒಂದು ತಂತ್ರಾಂಶದೊಂದಿಗೆ ಮುಂದಡಿಯಿಟ್ಟೆವು. ರೈತರು, ಸಾವಯವ ಸಗಟು ವ್ಯಾಪಾರಿಗಳು, ಕಂಪನಿಗಳು, ಎಫ್‌ಪಿಒಗಳು ಇತ್ಯಾದಿ ಹೀಗೆ ಈ ಆಹಾರದ ಮೌಲ್ಯ ಸರಪಳಿಯ ಹಲವು ಭಾಗೀದಾರರ ವಿವರಗಳನ್ನು ಒಳಗೊಂಡ ಹಲವು ಡೇಟಾಬೇಸ್ ಲಭ್ಯವಿತ್ತು. ಮುಂದಿನದು ಸಂವಹನದ ಹಂತ. ಬಾಹ್ಯ ಸೇವೆಗಳು ವಹಿವಾಟು ಸಂದೇಶಗಳನ್ನು ರವಾನಿಸುವುದು ಹಾಗೂ ಮೊಬೈಲ್ ಆಪ್‌ಗಳಿಗೆ ಸಂದೇಶ ಸೇವೆಗಳನ್ನು ರವಾನಿಸುವುದು ಇದರ ಭಾಗವಾಗಿತ್ತು. ತಮಿಳು ಭಾಷೆಯಲ್ಲಿಯೇ ಈ ಮೊಬೈಲ್ ತಂತ್ರಾಂಶವನ್ನು ರೈತರಿಗಾಗಿ ರೂಪಿಸಲಾಯಿತು (ಪ್ರಸ್ತುತ ಆಂಡ್ರಾಯ್ಡ್ ಮತ್ತು ಐಒಎಸ್‌ನ ಸೀಮಿತ ಆವೃತ್ತಿಗೆ ಬಿಡುಗಡೆ ಮಾಡಲಾಗಿದೆ). ತಯಾರಕರು ಮತ್ತು ಸಗಟು ವ್ಯಾಪಾರಿಗಳಿಗಾಗಿ ಇಂಗ್ಲೀಷಿನಲ್ಲಿ ವೆಬ್‌ಪೋರ್ಟಲ್ ರೂಪಿಸಲಾಗಿದೆ (ಇದರ ಕೆಲಸ ಜಾರಿಯಲ್ಲಿದೆ).

ಎಲ್ಲಕ್ಕಿಂತ ಹೆಚ್ಚಾಗಿ ತಂತ್ರಜ್ಞಾನದ ವೇದಿಕೆಯನ್ನು ನಿರ್ಮಿಸುವುದು ಸುಲಭ ಎನ್ನುವುದು ನಾವು ಕಲಿತ ಮುಖ್ಯ ಪಾಠ. ತಂತ್ರಜ್ಞಾನವು ಎಲ್ಲ ಅಗತ್ಯಗಳಿಗೆ ಸಲಕರಣೆಯಾಗಬಲ್ಲುದು. ಇದು ಸಮಾಜದ ಒಳಿತಿಗೆ ಸಾಧಕವಾಗಬಲ್ಲುದು ಮತ್ತು ಕೆಡುಕನ್ನು ಕಿತ್ತೊಗೆಯಬಲ್ಲುದು. ಯಾವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಕರ್ಷಣೆಗಳು ತಂತ್ರಜ್ಞಾನವನ್ನು ಸೇವೆಯ ಸಲಕರಣೆಯಾಗಿ ಇಲ್ಲವೇ ವಿನಾಶದ ಶಸ್ತ್ರಾಸ್ತ್ರವಾಗಿ ಮಾಡುತ್ತದೆ ಎನ್ನುವುದು ಚಿಂತನಾರ್ಹ ವಿಷಯ. ನಮ್ಮ ಯೋಜನೆಯನ್ನು ಅಂತಿಮಗೊಳಿಸುವ ಮೊದಲು ನಮ್ಮ ಆಲೋಚನೆಗಳು ಹೇಗಿತ್ತು ಎನ್ನುವುದನ್ನು ಹಂಚಿಕೊಳ್ಳುತ್ತಿದ್ದೇನೆ. ನಮ್ಮಂತೆ ತಂತ್ರಜ್ಞಾನ ಆಧಾರಿತ ಸಾಮಾಜಿಕ ಎಂಟರ್‌ಪ್ರೈಸ್ ಆರಂಭಿಸಲು ಯೋಚಿಸುತ್ತಿರುವವರಿಗೆ ಇದರಿಂದ ಉಪಯೋಗವಾಗಬಹುದು.

## ಎಲ್ಲವನ್ನೂ ಒಳಗೊಳ್ಳಬಲ್ಲ ತಂತ್ರಜ್ಞಾನ

ತಂತ್ರಜ್ಞಾನ ಆಧಾರಿತ ವೇದಿಕೆ ಸಿದ್ಧಪಡಿಸುವ ಮುನ್ನ ಅದರ ಸುತ್ತ ಇರುವ ಎಲ್ಲ ಅಂಶಗಳನ್ನು ಪರಿಗಣಿಸಬೇಕು. ನಾವು ತಂತ್ರಜ್ಞಾನೇತರ

ಅಂಶಗಳನ್ನು ಗಮನಿಸಲು ಕೆಲವು ಮೂಲಭೂತ ಪ್ರಶ್ನೆಗಳನ್ನು ರೂಪಿಸಿಕೊಂಡೆವು. ಇದು ಸವಾಲಿನ ಕೆಲಸವಾಗಿತ್ತು. ಏಕೆಂದರೆ ತಪ್ಪು ಆಯ್ಕೆ ಅಥವ ತಪ್ಪು ನಡೆಯಿಂದ ಮಿಲಿಯನ್‌ಗಟ್ಟಲೆ ರೈತ ಕುಟುಂಬಗಳು ತೊಂದರೆಗೆ ಸಿಕ್ಕಿಹಾಕಿಕೊಳ್ಳಬಹುದು. ನಾವು ರೂಪಿಸಿಕೊಂಡ ಪ್ರಶ್ನೆಗಳು :

- **ಮಾಲೀಕತ್ವ ಮತ್ತು ವಿನ್ಯಾಸ :** ತಂತ್ರಜ್ಞಾನದ ಮಾಲೀಕತ್ವ ಯಾರ ಬಳಿಯಿರುತ್ತದೆ? ಅದರಲ್ಲೂ ಅದರ ಮಾಹಿತಿಗಳು ಮತ್ತು ಸಂಬಂಧಗಳು ಒಡೆತನ ಯಾರದ್ದಾಗಿರುತ್ತದೆ? ಯಾವ ಸಾಮಾಜಿಕ ರಚನೆ ತಂತ್ರಜ್ಞಾನವನ್ನು ರೂಪಿಸುತ್ತದೆ ಇಲ್ಲವೆ ಬಲಪಡಿಸುತ್ತದೆ? ಸಮುದಾಯವು ಮಾಲೀಕತ್ವ ಅದರ ಸಂರಚನೆ ಕುರಿತು ಏನಾದರೂ ಹೇಳುತ್ತದೆಯೆ?

- **ವಿಪತ್ತು ಮತ್ತು ಲಾಭ :** ಯಾರು ವೇದಿಕೆಯ ಆಪತ್ತಿನ ಹೊಣೆ ಹೊರುವರು? ಯಾರಿಗೆ ಇದರಿಂದ ಲಾಭವಾಗುತ್ತದೆ? ವಿಪತ್ತು ಮತ್ತು ಲಾಭಗಳು ನ್ಯಾಯಯುತವಾಗಿ ಹಂಚಿಕೆಯಾಗುತ್ತದೆಯೇ?

- **ಹಣಕಾಸು ಮತ್ತು ಮೌಲ್ಯದ ಹರಿವು :** ಯಾವ ದಿಕ್ಕಿನಲ್ಲಿ ಹಣಕಾಸು ಮತ್ತು ಮೌಲ್ಯದ ಹರಿವು ಹರಿಯುತ್ತಿದೆ? ಇದು ಮೌಲ್ಯ ಸರಪಳಿಯಲ್ಲಿರುವ ಎಲ್ಲರಿಗೂ ಸಿಗುತ್ತದೆಯೇ ಹಾಗೂ ಸಾಮರ್ಥ್ಯ ವೃದ್ಧಿಸುತ್ತಿದೆಯೇ?

- **ಅನುದ್ದೇಶಿತ ಪರಿಣಾಮಗಳು ಮತ್ತು ಕಲಿಕಾ ಸರಣಿ :** ತಂತ್ರಜ್ಞಾನ ವೇದಿಕೆಯನ್ನು ಸೃಷ್ಟಿಸುವವರ ಮನಸ್ಸಿನಲ್ಲೊಂದು ಉದ್ದೇಶವಿರುತ್ತದೆ. ಆ ಉದ್ದೇಶವನ್ನು ಪೂರೈಸುವ ಧಾವಂತದಲ್ಲಿ ನಾವು ಅನುದ್ದೇಶಿತ ಪರಿಣಾಮಗಳನ್ನು ಗಮನಿಸದೆ ಇರಬಹುದು? ಇದನ್ನು ಸರಿಪಡಿಸಿ ಪ್ರತಿಕ್ರಿಯೆಗಳನ್ನಾಧರಿಸಿ ಹಾಗೂ ಕಲಿಕೆಯನ್ನಾಧರಿಸಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದೆ? ಭವಿಷ್ಯದ ಯೋಜನೆಗಳು ಮತ್ತು ಕಾರ್ಯಗಳಿಗೆ ಯಾವ ರೀತಿಯ ಕಲಿಕಾ ಸರಣಿಯ ವಿನ್ಯಾಸವನ್ನು ರೂಪಿಸಬಹುದು?

ಈ ಪ್ರಶ್ನೆಗಳ ಅನ್ವೇಷಣೆಯು ನಮಗೆ ಎರಡು ಭಿನ್ನ ದಾರಿಗಳನ್ನು ತೋರಿಸಿತು. ತಂತ್ರಜ್ಞಾನವು ಸಂಗ್ರಹವನ್ನಷ್ಟೇ ಸಮರ್ಥಿಸುವ ವ್ಯಾಪಾರದ ಮಾದರಿಯಾಗುವುದು. ಇಲ್ಲವೇ ತಂತ್ರಜ್ಞಾನವು ಪುನರುತ್ಪಾದಕ ಕೃಷಿವಿಜ್ಞಾನದ ಸಲಕರಣೆಯಾಗುವುದು.




ತಂತ್ರಾಶದ ಸ್ಕ್ರೀನ್‌ಶಾಟ್

## ಸಾರಹೀರಲು ಬಲತುಂಬುವ ತಂತ್ರಜ್ಞಾನ

ಜನನಿ ಮಾರುಕಟ್ಟೆಯ ಯಶಸ್ಸು ಅದರಲ್ಲಿ ಭಾಗಿಯಾದವರಿಗೂ ಲಾಭ ತಂದುಕೊಡುತ್ತದೆ. "ಯಶಸ್ಸಿನ" ಮಾದರಿಗಳು ಹಲವಾರಿವೆ. ಅವುಗಳಲ್ಲಿ ಯಶಸ್ಸನ್ನು ಬೆಳವಣಿಗೆ, ಲಾಭ, ಕಂಪನಿಯ ಮೌಲ್ಯಮಾಪನ ಹೀಗೆ ಆರ್ಥಿಕ ಹಿನ್ನಲೆಯಲ್ಲಿ ವಿವರಿಸಲಾಗುತ್ತದೆ. ಅಮೆಜಾನ್, ಫೇಸ್‌ಬುಕ್ ಮತ್ತು ಊಬರ್ ಈ ರೀತಿಯ ಕೆಲವು ಯಶಸ್ವಿ ಉದಾಹರಣೆಗಳು.

ಸಾರವನ್ನು ಹೀರಿ ಸಂಗ್ರಹ ಮಾಡುವುದು ವ್ಯಾಪಾರದ ಮಾದರಿಗೆ ಹೆಚ್ಚು ಸೂಕ್ತವಾದದ್ದು. ತಂತ್ರಜ್ಞಾನವನ್ನು ಹಲವು ವರ್ಷಗಳ ಕಾಲ ಕಟ್ಟಲಾಗುತ್ತದೆ, ಬದಲಿಸಲಾಗುತ್ತದೆ, ಮುರಿದು ಮತ್ತೆ ಕಟ್ಟಲಾಗುತ್ತದೆ. ತಂತ್ರಜ್ಞಾನದ ಅಂಶಗಳನ್ನು ಅನ್ಯರು ಬಳಸಲೆಂದು ಮುಕ್ತ ತಂತ್ರಾಶವಾಗಿರಿಸುತ್ತಾರೆ. ನಾವು ಕೂಡ ಮೊದಲು ಇದೇ ರೀತಿ ಜನನಿಯನ್ನು ಮುಕ್ತತಂತ್ರಾಶವಾಗಿಸಿದೆವು. ಫೇಸ್‌ಬುಕ್ ನಮಗೆ ನೆರವನ್ನು ನೀಡಿತು. ಈಗ ಇದನ್ನು ನೋಡಿದಾಗ ನಾವು ಅಭಿವೃದ್ಧಿಪಡಿಸಲು ಬಯಸಿದ ಮಾದರಿ ಇದಲ್ಲ ಅನ್ನಿಸುತ್ತದೆ.

ಈ ವೇದಿಕೆಗಳು ಮತ್ತು ಮಾರುಕಟ್ಟೆ ಸ್ಥಳಗಳಲ್ಲಿ ತಂತ್ರಜ್ಞಾನಗಳು ಸೇವೆಯನ್ನು ಪಡೆಯುತ್ತವೆ. ತಮ್ಮ ಗ್ರಾಹಕರಿಗೆ ಸೇವೆ ಸಲ್ಲಿಸುವ ನೆಪದಲ್ಲಿ ಕಡಿಮೆ ವೆಚ್ಚ (ಅಮೆಜಾನ್) ಅಥವ ಅನುಕೂಲ (ಊಬರ್) ಅಥವ ಸಂಪರ್ಕ ಸುಲಭ ಸಾಧ್ಯವಾಗಿಸುವುದು (ಫೇಸ್ಬುಕ್). ಈ ಎಲ್ಲ ವೇದಿಕೆಗಳು ತಮಗೆ ಸೇವೆ ಒದಗಿಸುತ್ತಿರುವವರನ್ನು ಗ್ರಾಹಕರಿಂದ ದೂರವಿಡುತ್ತದೆ. ನಮ್ಮ ಸಂಬಂಧ ವೇದಿಕೆಯೊಂದಿಗೆ ಹೊರತು ವ್ಯಕ್ತಿಯೊಂದಿಗಲ್ಲ ಎನ್ನುತ್ತವೆ. ಈ ಮಾದರಿಯಲ್ಲಿ **ವಿಪತ್ತುಗಳು ತಳದಲ್ಲಿ ಕೂರುತ್ತವೆ. ಸನ್ಮಾನಗಳು ಮೇಲೆ ತೇಲುತ್ತವೆ.** ಹಲವಾರು ಸೇವಾದಾರರು ಕಡಿಮೆ ಬೆಲೆಗೆ ತಮ್ಮ ಸೇವೆಯನ್ನು ಒದಗಿಸಬೇಕಾಗುತ್ತದೆ. ಅಸಂಖ್ಯಾತ ಊಬರ್ ಚಾಲಕರು ತಮ್ಮ ಕಾರುಗಳ ಸಾಲದ ಕಂತನ್ನು ಕಟ್ಟಲಾಗುವುದಿಲ್ಲ. ಅಮೆಜಾನ್ಗೆ ತಮ್ಮ ಮಾಹಿತಿಯನ್ನು ಹಂಚಿಕೊಳ್ಳುತ್ತಿರುವ ವ್ಯಾಪಾರಸ್ಥರು ಉತ್ಪನ್ನಗಳ ನಡುವೆ ಸ್ಪರ್ಧೆಗೆ ಅದನ್ನು ಬಳಸಿಕೊಳ್ಳಲಾಗುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಾರೆ. **ಸನ್ಮಾನ, ಹಣಕಾಸು, ಮೌಲ್ಯ, ಮಾಲೀಕತ್ವ ಹಾಗೂ ವಿನ್ಯಾಸ ಇವೆಲ್ಲವೂ ಮೇಲೆ ತೇಲುತ್ತವೆ.** ಸ್ಥಳೀಯ ಸಮುದಾಯಗಳಿಂದ ದೂರವಾಗುತ್ತವೆ. ಕಡೆಗೆ ಇದು ವೇದಿಕೆ ಕಾರ್ಯನಿರ್ವಾಹಕ ಮಾಲೀಕರ ಹಿಡಿತದಲ್ಲಿ ಉಳಿಯುತ್ತದೆ.

ಈ ಮಾದರಿಗಳ ನ್ಯೂನ್ಯತೆಗಳು ಕಣ್ಣಿಗೆ ಕಾಣುವಂತಿದ್ದು ಇವು ಬೇಕೆಂದೇ ಈ ವಿಷಯಗಳನ್ನು ಕಡೆಗಣಿಸಿವೆ ಇಲ್ಲವೇ ಅದನ್ನು ಬದಲಾಯಿಸಲು ಅವುಗಳಿಗೆ ಸಾಧ್ಯವಾಗಿಲ್ಲ. ಫೇಸ್ಬುಕ್ ಸುಳ್ಳು ಸುದ್ದಿಗಳ ಹಾವಳಿಗೆ ಸಿಲುಕಿರುವುದನ್ನು ನೋಡಬಹುದು. ಈ ವೇದಿಕೆಯು ಸುದ್ದಿ ಮಾಧ್ಯಮ ಕ್ಷೇತ್ರದ ಲೆಕ್ಕಾಚಾರವನ್ನು ಬದಲು ಮಾಡಿ ಜಾಹಿರಾತುಗಳಲ್ಲಿ ಡಾಲರುಗಟ್ಟಲೇ ಹಣ ಸಂಪಾದಿಸಿತು. ಒಂದು ಅನುದ್ದೇಶಿತ ಪರಿಣಾಮವು ಈಗ ಅದರ ಪರಿಸ್ಥಿತಿಯನ್ನು ತಲೆಕೆಳಗಾಗಿಸಿದೆ. ಇಡೀ ವಿಶ್ವದಾದ್ಯಂತ ಈಗ ರಾಜಕೀಯ ಸಾಮಾಜಿಕ ಸುಳ್ಳು ಸುದ್ದಿಗಳ ಆತಂಕ ಹೆಚ್ಚಿದೆ. ಆರಂಭದಲ್ಲಿ ಜಾಹಿರಾತಿನ ಆದಾಯಕ್ಕೆ ಮಾತ್ರ ಗಮನಕೊಟ್ಟ ಫೇಸ್ಬುಕ್ ಈಗ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಹೆಣಗುತ್ತಿದೆ.

ಈ ಮಾದರಿಯು ತಾಂತ್ರಿಕವಾಗಿ ಹಾಗೂ ಹಣಕಾಸಿನ ದೃಷ್ಟಿಯಿಂದ ಯಶಸ್ವಿಯಾದಂತೆ ಕಂಡರೂ ದೀರ್ಘಾವಧಿಯಲ್ಲಿ ನಿಲ್ಲಬಲ್ಲ ಸುಸ್ಥಿರ ಮಾದರಿಯಲ್ಲ. ಈ ರೀತಿಯ ಮಾದರಿಗಳು ಯಾವುದೇ ವಲಯದಲ್ಲಾದರೂ ಕೂಡ ಕೈಗಾರಿಕರಣದ ಪಳೆಯುಳಿಕೆಯಂತಿರುತ್ತದೆ ಹಾಗೂ ಕೇಂದ್ರೀಕರಣದತ್ತಲೇ ಸಾಗುತ್ತದೆ. ಅದು ಉಂಟುಮಾಡುವ ಹಾನಿಯನ್ನು ವ್ಯವಸ್ಥೆ ಸರಿಪಡಿಸಲು ಸಾಧ್ಯವಿಲ್ಲ. ಜನನಿ ವೇದಿಕೆಗೆ ನಾವು ಬೇರೆ ರೀತಿಯ ಮಾದರಿಯ ಕುರಿತು ಯೋಚಿಸಿದೆವು.

## ಪುನರುತ್ಪಾದಕ ಕೃಷಿವಿಜ್ಞಾನಕ್ಕೆ ತಂತ್ರಜ್ಞಾನವೊಂದು ಸಲಕರಣೆ

ತಮಿಳುನಾಡಿನ ಕೃಷಿಯಲ್ಲಿ ಈಗಾಗಲೇ ಸಾರಹೀರುವ ಸಂಗ್ರಹಿಸುವ ಸಮಸ್ಯೆಯಿದೆ. ನೀರಿಗಾಗಿ ಆಳವಾದ ಕೊಳವೆಬಾವಿಗಳನ್ನು ಕೊರೆಯುತ್ತಿದ್ದೇವೆ. ಬಳಲಿದ ಮಣ್ಣನ್ನು ಹಿಂಡಿ ಇಳುವರಿ ಪಡೆಯಲು ಪ್ರಯತ್ನಿಸುತ್ತೇವೆ. ಹವಾಮಾನ ಬದಲಾವಣೆಯು ಹೆಚ್ಚಾಗುತ್ತಿದೆ. ಪ್ರಕೃತಿ ವಿಕೋಪಗಳ ತೀವ್ರತೆಯು ಹೆಚ್ಚಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ಪುನರುತ್ಪಾದಕ ಕೃಷಿವಿಜ್ಞಾನವು ಕಡಿಮೆ ವೆಚ್ಚದ, ಕಡಿಮೆ ತಾಂತ್ರಿಕತೆಯ, ದೀರ್ಘಾವಧಿ ಪರಿಹಾರಗಳನ್ನು ಕೃಷಿಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ನೀಡಿದೆ.

ಪುನರುತ್ಪಾದಕ ಕೃಷಿವಿಜ್ಞಾನವು ಸಾರಹೀರುವ ಕೃಷಿವ್ಯವಹಾರಕ್ಕೆ ಬದಲಿಯಾಗಬಲ್ಲುದಾದರೆ ತಂತ್ರಜ್ಞಾನಕ್ಕೆ ಬದಲಿ ಯಾವುದು? ತಂತ್ರಜ್ಞಾನವು ತನ್ನ ಸ್ವರೂಪವನ್ನು ಬದಲಿಸಿಕೊಂಡು ಪುನರುತ್ಪಾದಕ ಕೃಷಿವಿಜ್ಞಾನಕ್ಕೆ ಪೂರಕ ಸಲಕರಣೆಯಾಗಬಲ್ಲುದೆ? ಪುನರುತ್ಪಾದಕತೆಯ ಸಾರವನ್ನು ತನ್ನಲ್ಲಿಟ್ಟುಕೊಂಡಂತಹ ತಂತ್ರಜ್ಞಾನ ಹಾಗೂ ಮಾರುಕಟ್ಟೆ ವೇದಿಕೆಯನ್ನು ನಿರ್ಮಿಸಲು ಸಾಧ್ಯವೆ? ಜನನಿಯು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಶ್ರಮಿಸುತ್ತಿದೆ. ನಮಗಿನ್ನೂ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ಜೊತೆಗೆ ಈಗ ದೊರಕಿರುವ ಉತ್ತರಗಳನ್ನು ಪರೀಕ್ಷಿಸಬೇಕಿದೆ. ಆ ಪ್ರಕ್ರಿಯೆಯಲ್ಲಿ ಮತ್ತಷ್ಟು ತಪ್ಪುಗಳು ಕಂಡುಬರಬಹುದು. ಈ ಎಲ್ಲ ತೊಡಕುಗಳ ನಡುವೆಯೂ ಜನನಿ ಮಾರುಕಟ್ಟೆಯು ಮೇಲಿನ ಮೂಲಭೂತ ಪ್ರಶ್ನೆಯನ್ನು ಹೇಗೆ ನಿರ್ವಹಿಸುತ್ತಿದೆ?

- **ಮಾಲೀಕತ್ವ ಮತ್ತು ವಿನ್ಯಾಸ :** ಜನನಿಯ ಮಾರುಕಟ್ಟೆಯಲ್ಲಿ ಮಾಹಿತಿ ಹಾಗೂ ಸಂಬಂಧಗಳ ಮಾಲೀಕತ್ವ ರೈತರು ಮತ್ತು ರೈತ ಗುಂಪುಗಳ ಬಳಿಯೇ ಇರುತ್ತವೆ. ಮಾಹಿತಿಯು ಸ್ವಲ್ಪ ತಡವಾಗಿ ಗಮನಸೆಳೆಯುತ್ತದೆ. ಉತ್ಪಾದಕರು ಗ್ರಾಹಕರ ನಡುವೆ ಸಂಪರ್ಕ ಏರ್ಪಡಿಸುವಲ್ಲಿ ಸಂಬಂಧವು ಮುಖ್ಯಪಾತ್ರ ವಹಿಸುತ್ತದೆ. ಜನನಿಯ ವೇದಿಕೆಯು ಎಲ್ಲ ಸಂಪರ್ಕಗಳನ್ನು ಒಂದೆಡೆ ಬೆಸೆದಿದ್ದು ಯಶಸ್ಸು ಎಲ್ಲರನ್ನೂ ಅವಲಂಬಿಸಿರುತ್ತದೆ. ಈ ಮಾದರಿಯು ತಾಂತ್ರಿಕವಾಗಿ ಸವಾಲನ್ನುಂಟು ಮಾಡುವಂತದ್ದಾಗಿತ್ತು. ಮಾಹಿತಿ, ಫೈಲುಗಳ ಸಂಗ್ರಹ, ಸಂವಹನ, ಪಾವತಿ ಪ್ರಕ್ರಿಯೆ ಇತ್ಯಾದಿಗಳನ್ನು ಇದರಲ್ಲಿ ನಿರ್ವಹಿಸುವುದು ಸವಾಲಿನ ಸಂಗತಿಯಾಗಿತ್ತು. ಸಮುದಾಯ ಮಾಲೀಕತ್ವ ಎನ್ನುವುದು ಬಹಳ ಸೂಕ್ಷ್ಮವಾದ ಸಂಗತಿ. ಇದನ್ನು ಮಾಲೀಕ ಮತ್ತು ಬಳಕೆದಾರರ ವೇದಿಕೆಯನ್ನಾಗಿಸಲು ಸಾಗಬೇಕಾದ ಹಾದಿ ದೂರವಿದೆ.

- **ವಿಪತ್ತು ಮತ್ತು ಲಾಭ :** ರೈತರು ಈಗಾಗಲೇ ಕೃಷಿಯಲ್ಲಿ ಹೆಚ್ಚಿನ ಅಪಾಯದ ಸನ್ನಿವೇಶವನ್ನು ಎದುರಿಸುತ್ತಿದ್ದಾರೆ. ವೇದಿಕೆಯನ್ನು ನಿರ್ಮಿಸಿ ಇನ್ನಷ್ಟು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ವಿಪತ್ತು ಮತ್ತು ಸನ್ಮಾನ ಎರಡನ್ನೂ ಹಂಚಿಕೊಳ್ಳುವ ಪಾರದರ್ಶಕ ಮಾದರಿಗಳನ್ನು ಹುಡುಕಲು ಬಯಸುವ ಹೂಡಿಕೆದಾರರನ್ನು ಹುಡುಕುವುದು ಕಷ್ಟದ ಕೆಲಸ.

- **ಹಣಕಾಸು ಮತ್ತು ಮೌಲ್ಯದ ಹರಿವು :** ತಂತ್ರಜ್ಞಾನ ಆಧಾರಿತ ವೇದಿಕೆಯನ್ನು ಕಟ್ಟುವಾಗ ಮೌಲ್ಯ ಸರಪಳಿಯ ಉದ್ದಕ್ಕೂ ಹಣಕಾಸು ಹಾಗೂ ಮೌಲ್ಯದ ಹರಿವನ್ನು ನಿಭಾಯಿಸುವುದು ಬಹುದೊಡ್ಡ ಸವಾಲು. ಈ ಪ್ರಕ್ರಿಯೆಯ ಹಲವು ವಿಧಗಳನ್ನು ಗಮನಿಸಿದ ಮೇಲೆ ಜನನಿಯು ಬದಲಿ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ. ಇದಕ್ಕೆ ಒಂದು ಉದಾಹರಣೆ ಪಿಜಿಎಸ್ ಇಂಡಿಯಾವನ್ನು ಅಳವಡಿಸಿಕೊಂಡಿದ್ದು. ಇದು ಸಾವಯವ ವಿಧಾನವನ್ನು ಪ್ರಮಾಣೀಕರಿಸುತ್ತದೆ. ಸ್ಥಳೀಯವಾಗಿ ರೈತರು ಬಳಸುತ್ತಿರುವ ತಿಳಿವಳಿಕೆಯನ್ನು ವಿಮರ್ಶಿಸುತ್ತದೆ. ರೈತರು ಈ ವೇದಿಕೆಯಲ್ಲಿ ತಮ್ಮ ತಿಳಿವಳಿಕೆಯ ಸಂಪನ್ಮೂಲಗಳನ್ನು, ಮಾಹಿತಿಯನ್ನು ಕೊಳ್ಳುವವರು ಮತ್ತು ಇತರ ರೈತರೊಂದಿಗೆ ಹಂಚಿಕೊಳ್ಳಬಹುದು.

- **ಅನುದ್ದೇಶಿತ ಪರಿಣಾಮಗಳು ಮತ್ತು ಕಲಿಕಾ ಸರಣಿ :** ಜನನಿಯು ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಶೀಘ್ರ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ. ಅದು ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಿ ಬಿಡುಗಡೆ ಮಾಡುತ್ತದೆ. ಪ್ರತಿಯೊಂದು ಬಾರಿ ಬಿಡುಗಡೆಯಾದಾಗಲೂ ಅದರ ಕೊರತೆಗಳು ಏನಿವೆ ಅದನ್ನು ಬಳಕೆದಾರರ ಪ್ರತಿಕ್ರಿಯೆಯಿಂದ ತಿಳಿದುಕೊಂಡು ಮತ್ತೊಮ್ಮೆ ತಂತ್ರಾಂಶ ಅಭಿವೃದ್ಧಿಗೊಳಿಸುವಾಗ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತದೆ. ಇದೇ ವಿಧಾನವನ್ನು ಕ್ಷೇತ್ರ ಚಟುವಟಿಕೆಗಳಲ್ಲೂ ಅನುಸರಿಸಲಾಗುತ್ತದೆ. ಹೀಗೆ ಕಲಿಕೆಯಿಂದ ತಂತ್ರಜ್ಞಾನ ವೇದಿಕೆಯು ಕ್ಷೇತ್ರದ ಚಟುವಟಿಕೆಗಳಿಂದ ಕಲಿಯುತ್ತದೆ. ಅದೇ ರೀತಿ ತಂತ್ರಜ್ಞಾನದಿಂದ ಕ್ಷೇತ್ರದ ಚಟುವಟಿಕೆಗಳು ರೂಪುಗೊಳ್ಳುತ್ತವೆ.

ನಮ್ಮ ಆಹಾರ ವ್ಯವಸ್ಥೆಗಳು ಇಂದಿಗೂ ಕೈಗಾರಿಕರಣದ ಮನಸ್ಥಿತಿಯಿಂದ ಹೊರಬಂದಿಲ್ಲ. ಎಲ್ಲವೂ ಸಾರಹೀರುವ ವ್ಯವಹಾರದ ಮಾದರಿಯಲ್ಲೇ ಕೇಂದ್ರೀಕೃತವಾಗಿದೆ. ಆಹಾರವನ್ನು ಒಂದು ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಸಂಸ್ಕರಣಕ್ಕೆ ಮೈಲಿಗಟ್ಟಲೇ ಹಾದಿಯನ್ನು ಕ್ರಮಿಸಬೇಕಾಗುತ್ತದೆ. ನಂತರ ಗ್ರಾಹಕರಿಗೆ ತಲುಪಲು ಮತ್ತೆ ಹಲವು ಮೈಲಿಗಳನ್ನು ಕ್ರಮಿಸಬೇಕಾಗುತ್ತದೆ. ಕೋವಿಡ್ 19 ಹಾಗೂ ಇಂತಹದ್ದೇ ಪರಿಸ್ಥಿತಿಗಳು ಈ ವ್ಯವಸ್ಥೆಯ ಟೊಳ್ಳುತನವನ್ನು ತೋರಿಸಿಕೊಟ್ಟವು.

ವಿಕೇಂದ್ರಿಕರಣ ಹಾಗೂ ಪುನರುತ್ಪಾದಕತೆಗೆ ಒತ್ತು ನೀಡುವ ಮಾದರಿಯು ಈ ಕಾಲದ ತುರ್ತು. ಜನನಿಯ ಮಾರುಕಟ್ಟೆ ವೇದಿಕೆಯು ಈ ರೀತಿಯ ಒಂದು ಪರಿಹಾರವಾಗಿದೆ. ಸಮಾಜಕ್ಕೆ ಇನ್ನಷ್ಟು ಪುನರುತ್ಪಾದಕ ಪರಿಹಾರಗಳ ಅವಶ್ಯಕತೆಯಿದೆ. ಆಹಾರ ವ್ಯವಸ್ಥೆಗೆ ಸಂಬಂಧಿಸಿದ ವಿವಿಧ ಉತ್ತರಗಳನ್ನು ಹುಡುಕಿಕೊಳ್ಳುವ ಅವಶ್ಯಕತೆಯಿದೆ.

◆

**Usha Devi Venkatachalam**
Founder and CEO
Krishi Janani PBC
E-mail: team@krishijanani.org

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 2, ಜೂನ್ 2020.

# ನಮ್ಮ ಕೈತೋಟ ನಮ್ಮ ಬದುಕು

**ಸುರೇಶ್ ಕಣ್ಣ**

ಪ್ರಪಂಚದಾದ್ಯಂತ ‘ನಿಮ್ಮ ಆಹಾರವನ್ನು ನೀವೇ ಬೆಳೆಯಿರಿ’ ಎನ್ನುವ ಸಿದ್ಧಾಂತ ನಗರ, ಪಟ್ಟಣಗಳಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಮಿಂಚಿನ ವೇಗದಲ್ಲಿ ನಡೆಯುತ್ತಿರುವ ನಗರೀಕರಣವು ರಸ್ತೆಗಳನ್ನು, ನೀರನ್ನೂ ಘನತ್ಯಾಜ್ಯದಿಂದ ಮಲಿನಗೊಳಿಸುತ್ತಿದೆ. ಬಡತನ ಹೆಚ್ಚಲು ಇಂಧನ ಹಾಗೂ ನೀರಿನ ಕೊರತೆ ಹೆಚ್ಚಲು ಕಾರಣವಾಗಿದೆ. ಪ್ರತಿಮನೆಯಲ್ಲೂ ಹಿತ್ತಲ ಇಲ್ಲವೇ ತಾರಸಿ ಮೇಲೆ ಕೈತೋಟ ಮಾಡುವುದು ಈ ಸಮಸ್ಯೆಯೆದುರಿಸಲು ನೆರವು ನೀಡಬಹುದು. ನಗರದಲ್ಲಿ ಹಸಿರನ್ನು ಉಳಿಸಿಕೊಳ್ಳಲು ಈ ತಂತ್ರ ನೆರವಾಗುತ್ತದೆ. ಜೊತೆಗೆ ಜನರ ವರ್ತನೆಯಲ್ಲೂ ಬದಲಾವಣೆ ತರುತ್ತದೆ. ನಾಗರಿಕರಿಗೆ ತಮ್ಮ ತರಕಾರಿ ಕೈತೋಟಗಳಿಗೆ ಬೇಕಾದ ಗೊಬ್ಬರವನ್ನು ತಾವೇ ತಯಾರಿಸಿಕೊಳ್ಳಲು ಉತ್ತೇಜನ ನೀಡಬೇಕು. ಆಗ ಮನೆಯಿಂದ ಹೊರಬೀಳುವ ತ್ಯಾಜ್ಯದ ಪ್ರಮಾಣ ತಗ್ಗುತ್ತದೆ.

ಈ ರೀತಿಯ ಕೈತೋಟಗಳು ಹಲವು ವಿಧದಲ್ಲಿ ಲಾಭದಾಯಕವಾಗಿದೆ. ಇವುಗಳಿಂದ ಸುರಕ್ಷಿತ, ಪೌಷ್ಟಿಕಾಂಶಯುಕ್ತ ತಾಜಾ ಆಹಾರವನ್ನು ಪಡೆಯಬಹುದು. ತ್ಯಾಜ್ಯ ನಿರ್ವಹಣೆಯು ಸುಲಭವಾಗಿ ಪರಿಸರ ಸ್ವಚ್ಛವಾಗಿರುತ್ತದೆ. ಅನಾರೋಗ್ಯದ ಸಮಸ್ಯೆಗಳು ಕಡಿಮೆಯಾಗುತ್ತದೆ. ದುರ್ಬಲ ಗುಂಪುಗಳು ಇದರಿಂದ ಹೆಚ್ಚುವರಿ ಆದಾಯವನ್ನು ಪಡೆಯಬಹುದು. ನಾಗರಿಕರು ಇತ್ಯಾತ್ಮಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತದೆ. ತಾಪಮಾನದೊಂದಿಗೆ ಇಂಗಾಲದ ಪ್ರಮಾಣವು ತಗ್ಗುತ್ತದೆ.

## ಕೈತೋಟದ ನನ್ನ ಅನುಭವ

ತಿರುಚ್ಚಿಯಲ್ಲಿ 2000ದಿಂದ ವಾಸಿಸುತ್ತಿದ್ದೇನೆ. ಮೊದಲಿಗೆ ನಾವು ಬಾಡಿಗೆ ಮನೆಯಲ್ಲಿದ್ದೆವು. ಅಲ್ಲಿ ಏನನ್ನಾದರೂ ಬೆಳೆಯಲು ಸಾಕಷ್ಟು ಜಾಗವಿರಲಿಲ್ಲ. ಸ್ವಲ್ಪ ಸೊಪ್ಪು ಹಾಗೂ ಸಣ್ಣ ಗಿಡಗಳನ್ನು ಬಾಟಲಿಗಳು ಮತ್ತಿತರ ವಸ್ತುಗಳಲ್ಲಿ ಬಳಸಿ ಬಾಲ್ಕನಿಯಲ್ಲಿ ಬೆಳೆಯುತ್ತಿದ್ದೆವು. ವರ್ಷದ ಹಿಂದೆ ತಿರುಚ್ಚಿಯ ಹೊರವಲಯದಲ್ಲಿರುವ ಸ್ವಂತ ಮನೆಗೆ ಬಂದೆವು. 800 ಚದರಡಿಯಲ್ಲಿ ಮನೆಯನ್ನು ಕಟ್ಟಿದೆವು. ಉಳಿದ 1600 ಚದುರಡಿಗಳಷ್ಟನ್ನು ಕೈತೋಟಕ್ಕೆಂದೇ ಖಾಲಿಯಾಗಿ ಉಳಿಸಿಕೊಂಡೆವು.

ಸಸ್ಯವಿಜ್ಞಾನವನ್ನು ಓದಿರುವುದರೊಂದಿಗೆ 1995ರಿಂದ ತಿರುಚ್ಚಿಯ ಕುಟುಂಬಂ ಸಂಸ್ಥೆಯೊಂದಿಗೆ ಕೆಲಸ ಮಾಡುತ್ತಿದ್ದೇನೆ. ಆ ಅನುಭವದಿಂದ ಸುಸ್ಥಿರ ಕೃಷಿಯ ತಂತ್ರಗಳನ್ನು ಕಲಿತೆ. ಮೊದಲಿಗೆ ಮನೆಯ ಸುತ್ತ ಬೇಲಿ ಹಾಕಿದೆವು. ಆಮೇಲೆ ನಮ್ಮ ಕೈತೋಟವನ್ನು ರೂಪಿಸಿದೆವು.

ನಮ್ಮ ಮನೆಯಲ್ಲಿ ನನ್ನ ಹೆಂಡತಿ ಗಜ, ಮಗಳು ಶೃತಿ, ಮಗ ಹರೀಶ್ ಹಾಗೂ ನಾನು ಒಟ್ಟು ನಾಲ್ಕು ಮಂದಿಯಿದ್ದೇವೆ. ನಾವೇ ಈ ಕೈತೋಟವನ್ನು ವಿನ್ಯಾಸಗೊಳಿಸಿದೆವು. ಈ ಕೈತೋಟದ ವಿನ್ಯಾಸಗೊಳಿಸಲು ಸರಳ ಐಡಿಯಾ ಬಳಸಿದೆವು. ಮೊದಲಿಗೆ ನಾವೇನು ತಿನ್ನಲು ಇಷ್ಟಪಡುತ್ತೇವೋ ಅದನ್ನೇ ಬೆಳೆಯಲು ಶುರುಮಾಡಿದೆವು. ನಮ್ಮ ಮನೆಯಲ್ಲಿ ಅಡುಗೆಗೆ ಏನು ಬೇಕು ಎನ್ನುವುದನ್ನು ಮೊದಲು ಪಟ್ಟಿ ಮಾಡಿಕೊಂಡೆವು. ಅದರಲ್ಲಿ ಅಡುಗೆ ಮನೆ ಅಗತ್ಯಕ್ಕೆ ಬೇಕಾಗಿರುವುದನ್ನು ಅಲ್ಪಕಾಲಿಕ ಎಂದು ಪಟ್ಟಿ ಮಾಡಿದೆವು. ಅಡುಗೆಮನೆಗೆ ಸಂಬಂಧಿಸಿಲ್ಲದಿರುವುದನ್ನು ದೀರ್ಘಕಾಲಿಕ ಎಂದು ಪಟ್ಟಿ ಮಾಡಿಕೊಂಡೆವು. ನಮ್ಮ ಕೈತೋಟಕ್ಕೆ ತಗಲುವ ವೆಚ್ಚದ ಕುರಿತು ಎಚ್ಚರಿಕೆಯಿಂದ ಗಮನಿಸಿ ಹೆಜ್ಜೆಯಿಟ್ಟೆವು. ಮೊದಲಿಗೆ ನಮ್ಮಲ್ಲಿ ಇದ್ದುದ್ದನ್ನಷ್ಟೇ ಬಳಸಲು ನಿರ್ಧರಿಸಿದೆವು. ಮೂರು ಖಗಳನ್ನು ಅಂದರೆ – refuse (ನಿರಾಕರಣೆ), recycle (ಪುನರ್‌ಬಳಕೆಗೆ ಯೋಗ್ಯ), reuse (ಮರುಬಳಕೆ) ಇವಿಷ್ಟನ್ನೇ ಬಳಸಿದೆವು. ಈ ರೀತಿ ನಮ್ಮ ಮನೆಯ ಕೈತೋಟವನ್ನು ಎಂಟು ತಿಂಗಳ ಹಿಂದೆ ಶುರುಮಾಡಿದೆವು.

## ಅಡುಗೆಮನೆಯ ಅಗತ್ಯಕ್ಕೆ ಬೆಳೆಸಿದ ಗಿಡಗಳು

ಅಡುಗೆ ಮನೆಯ ಅಗತ್ಯಕ್ಕೆ ತಕ್ಕಂತೆ ಬಸಳೆ ಸೊಪ್ಪು, ಹೊನ್ನಗೊನ್ನೆ ಸೊಪ್ಪು, ಪುಂಡಿ ಸೊಪ್ಪು, ಮೆಂತ್ಯೆ, ನುಗ್ಗೆಯನ್ನು ಬೆಳೆದೆವು. ಇವುಗಳನ್ನು ತಿಂಡಿಗೆ, ಊಟಕ್ಕೆ ಬಳಸುತ್ತಿದ್ದೆವು. ಸಾಮಾನ್ಯವಾಗಿ ರಾತ್ರಿಯೂಟಕ್ಕೆ ಇದನ್ನು ಬಳಸುತ್ತಿರಲಿಲ್ಲ. ಇದರೊಂದಿಗೆ ಆಗಾಗ ಕರಬೇವನ್ನು ಬಳಸುತ್ತೇವೆ. ಇದರೊಂದಿಗೆ ಟೊಮೆಟೊ, ಬೆಂಡೆ, ಬದನೆ, ಸುಂಡೆ/ಉಸ್ತಿಕಾಯಿ, ಗೋರಿಕಾಯಿ, ನುಗ್ಗೆ ಕಾಯಿ, ಹಾಗಲ ಕಾಯಿ, ಸೋರೆ ಕಾಯಿ, ಬೂದುಗುಂಬಳ ದಂತಹ ತರಕಾರಿಗಳನ್ನು ಬೆಳೆದವು. ಇವುಗಳನ್ನು ಪಲ್ಯ ಮತ್ತು ಸಾಂಬಾರಿಗೆ ಬಳಸುತ್ತೇವೆ.

## ಆರೋಗ್ಯಕ್ಕಾಗಿ ಬೆಳೆದ ಗಿಡಗಳು

ಕೃಷ್ಣ ತುಳಸಿ, ಅಲೋವೆರಾ, ಆಡುಸೋಗೆ, ಗರಿಕೆ, ಬನತುಳಸಿ, ಅಂಬುಸೊಂಡೆ/ಕಾಕಮುಂಜಿ, ಮಂಗರವಳ್ಳಿ, ವಿಳ್ಯೆದೆಲೆ, ನಿಂಬೆ ಹುಲ್ಲು, ಕಾಡುಬಸಳೆ, ದೊಡ್ಡಪತ್ರೆ, ನೆಲನೆಲ್ಲಿ, ಸಾಸಿವೆ, ಕರಬೇವು, ಇನ್ಸುಲಿನ್, ಮೆಹಂದಿ, ಕುಪ್ಪಿಗಿಡಗಳನ್ನು ಬೆಳೆಸಿದೆವು. ಈ ಗಿಡಗಳ ಜಾಗವನ್ನು ನಮ್ಮ ಮನೆಯ ಔಷಧಾಲಯ ಎಂದು ಕರೆಯುತ್ತೇವೆ. ಈ ಗಿಡಗಳು ಸಾಮಾನ್ಯ ಕಾಯಿಲೆಗಳಾದ ಶೀತ, ಕೆಮ್ಮು, ನೆಗಡಿ, ಜ್ವರ, ಮೈಕೈನೋವು, ತಲೆನೋವು, ಅಜೀರ್ಣಗಳಿಗೆ ಔಷಧಿಯಾಗಿ ಬಳಕೆ ಮಾಡಬಹುದು ದೇಹದ ಉಷ್ಣಾಂಶ, ರಕ್ತದೊತ್ತಡ, ಸಕ್ಕರೆಯನ್ನು ನಿಯಂತ್ರಿಸಲು ಇವು ಸಹಾಯಕ. ಇವುಗಳನ್ನು ಹಸಿಯಾಗಿಯೇ ತಿನ್ನಬಹುದು ಇಲ್ಲವೆ ಟೀ, ಸೂಪ್, ಸಾಂಬಾರು ಅಥವ ಚಟ್ನಿ ಮಾಡಿಕೊಂಡು ಸೇವಿಸಬಹುದು.

## ಧಾರ್ಮಿಕ ಆಚರಣೆಗಳಿಗೆ ಬೆಳೆದ ಗಿಡಗಳು

ನಮ್ಮ ಕೈತೋಟದಲ್ಲಿ ಹೂವಿನ ಗಿಡಗಳು ಕೂಡ ಇವೆ. ಮಲ್ಲಿಗೆ, ದಾಸವಾಳ, ಸಂಜೆಮಲ್ಲಿಗೆ, ಜಾಜಿ, ಕಾಕಡ, ಕಣಗಿಲೆ ಹೂಗಳನ್ನು ಬೆಳೆದಿದ್ದೇವೆ. ಮಲ್ಲಿಗೆ ನನ್ನ ಹೆಂಡತಿ, ಮಗಳಿಗಾಗಿ ಉಳಿದ ಹೂಗಳನ್ನು ದೇವರ ಪೂಜೆಗಾಗಿ ಬಳಸುತ್ತೇವೆ. ಪ್ರತಿದಿನ ಬೆಳಗ್ಗೆ ಹಿಂದಿನ ದಿನ

ದೇವರಿಗೆ ಇಟ್ಟಿದ್ದ ಹೂಗಳನ್ನು ತೆಗೆದು ಗೊಬ್ಬರದ ಗುಂಡಿಗೆ ಹಾಕಿ ಹೊಸ ಹೂಗಳನ್ನು ಇಡುತ್ತೇವೆ. ದಾಸವಾಳದ ದಳಗಳು ರಕ್ತಶುದ್ಧಿ ಮಾಡುವ ಗುಣವನ್ನು ಹೊಂದಿದೆ. ಹಾಗಾಗಿ ದೇವರಿಗಿಟ್ಟು ಮಾರನೆಯ ದಿನ ಈ ಹೂಗಳನ್ನು ತೆಗೆದಾಗ ಅದರ ದಳಗಳನ್ನು ನಾವು ತಿನ್ನುತ್ತೇವೆ.

### ಮರಗಳು

ನಾವು ಬಹುಪಯೋಗಿ ಮರಗಳನ್ನು ಬೆಳೆಸಿದ್ದೇವೆ. ಹಣ್ಣಿನ ಮರಗಳಾದ ಮಾವು, ಪರಂಗಿ, ಗೋಡಂಬಿ, ಹಲಸು, ಸೀಬೆ, ಬಾಳೆ, ಸೀಮೆಹುಣಸೆ ಮತ್ತು ನೆಲ್ಲಿ ಇದೆ. ಬೆಲೆಬಾಳುವ ಮರಗಳಾದ ತೇಗ, ಮುಳ್ಳುಮುತ್ತುಗ, ಗಾಳಿಮರ, ಬೇವು ಮತ್ತು ಬುಗುರಿ ಮರಗಳನ್ನು ಬೆಳೆಯಲಾಗಿದೆ. ಹಣ್ಣಿನ ಮರಗಳು ಇನ್ನೆರೆಡು ವರ್ಷಗಳಲ್ಲಿ ಫಲ ಬಿಡುತ್ತವೆ. ಬೆಲೆಬಾಳುವ ಮರಗಳು ದೀರ್ಘಾವಧಿಯಲ್ಲಿ ನಮ್ಮ ಕುಟುಂಬಕ್ಕೆ ಲಾಭವನ್ನು ತಂದುಕೊಡುತ್ತದೆ.

### ಸಣ್ಣ ಸಂಗತಿಗಳು ಬಹುದೊಡ್ಡ ವ್ಯತ್ಯಾಸವನ್ನು ಮಾಡುತ್ತವೆ

ನಮ್ಮ ಕೈತೋಟದಲ್ಲಿ ಹಕ್ಕಿಗಳು ಕುಡಿಯಲೆಂದು ಅಲ್ಲಲ್ಲಿ ಬಾಟಲಿಗಳಲ್ಲಿ ನೀರನ್ನು ಇಟ್ಟಿದ್ದೇವೆ. ಅವು ನೀರು ಕುಡಿಯಲು ಬಂದಾಗ ಕೈತೋಟದಲ್ಲಿನ ಹುಳುಗಳನ್ನು ತಿಂದು ನಮಗೆ ಸಹಾಯ ಮಾಡುತ್ತದೆ. ನಾವು ಕೀಟಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ತೋಟವಿರುವುದು ಮನುಷ್ಯರಿಗಾಗಿ ಮಾತ್ರವಲ್ಲ ಎಲ್ಲ ಜೀವಿಗಳಿಗಾಗಿ. ನವಿಲುಗಳು, ಮೈನಾಗಳು, ಗುಬ್ಬಿಗಳು ನಮ್ಮ ತೋಟಕ್ಕೆ ಬರುತ್ತಲೇ ಇವೆ. ಗುಬ್ಬಿಗಳಿಗೆ ತೊಂದರೆಯಾಗದಂತೆ ಗೂಡುಕಟ್ಟಿಕೊಳ್ಳಲು ಸ್ಥಳ ಒದಗಿಸಿದ್ದೇವೆ. ನಮ್ಮ ಕೈತೋಟದಲ್ಲಿ ಬೇಕಾದಷ್ಟು ಎರೆಹುಳಗಳಿವೆ. ಇದರರ್ಥ ಕೈತೋಟದ ಮಣ್ಣು ಆರೋಗ್ಯಕರವಾಗಿ ಜೀವಂತವಾಗಿದೆ ಎಚಿದು.

ಈ ಕೈತೋಟದಿಂದಾಗಿ ಮುಂಜಾನೆ ತಾಜಾ ಗಾಳಿ ಸಿಗುತ್ತದೆ. ದಿನವೂ ನಾವೆಲ್ಲ ಕನಿಷ್ಠ ಒಂದು ಗಂಟೆ ಕೈತೋಟದಲ್ಲಿ ಕೆಲಸ ಮಾಡುತ್ತೇವೆ. ಇದು ನಮ್ಮನ್ನು ಸಧೃಡವಾಗಿ ಆರೋಗ್ಯವಾಗಿ ಇಡುವದರೊಂದಿಗೆ ನಮ್ಮ ಕುಟುಂಬವನ್ನು ನಿಸರ್ಗಕ್ಕೆ ಹತ್ತಿರವಾಗಿಸುತ್ತದೆ. ನಿಸರ್ಗ ನಮಗೆ ನೀಡಿರುವುದನ್ನು ಸಂತೋಷದಿಂದ ಅನುಭವಿಸಲು ಕಲಿಸುತ್ತದೆ. ತರಕಾರಿಗಳು, ಹಣ್ಣುಗಳು, ಸೊಪ್ಪುಗಳು, ಹೂವು ಎಲ್ಲವೂ ನಮ್ಮ ಮನೆಗೆ ನಮ್ಮ ಕೈತೋಟದಿಂದಲೇ ಬರುತ್ತದೆ. ಅಡುಗೆ ಮನೆಯ ತ್ಯಾಜ್ಯ ಮರಳಿ ಕೈತೋಟದ ಗೊಬ್ಬರವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮಗೆ ಬೇಕಾದ ಬೀಜಗಳನ್ನು ನಾವೇ ಸಂಗ್ರಹಿಸಲು ಶುರುಮಾಡಿದ್ದೇವೆ. ತರಕಾರಿಗಳು, ಕಾಳುಗಳು, ಗಿಡಮೂಲಕೆಗಳು, ಸೊಪ್ಪು ಮತ್ತು ಹೂವಿನ ಬೀಜಗಳ ಬ್ಯಾಂಕ್ ನಮ್ಮಲ್ಲಿದೆ.

ಇದು ಪರಿಸರಕ್ಕೆ ಹತ್ತಿರವಾದ, ಪುನರ್‌ಬಳಕೆ ಮಾಡುವ ಜೀವನ ವಿಧಾನ. ನಾವು ನಿರಾಕರಣೆ, ಪುನರ್‌ಬಳಕೆಗೆ ಯೋಗ್ಯವಾಗಿಸುವುದು ಮತ್ತು ಮರುಬಳಕೆಯ ತತ್ವದಲ್ಲಿ ನಂಬಿಕೆಯಿಟ್ಟಿದ್ದೇವೆ. ಎಲ್ಲ ಗಿಡಗಳನ್ನು ಹಳೆಯ ಪ್ಲಾಸ್ಟಿಕ್ ಟಬ್‌ಗಳು ಮತ್ತು ಬಾಟಲುಗಳಲ್ಲಿ ಬೆಳೆಸುತ್ತೇವೆ. ನಮ್ಮ ಬಹುತೇಕ ಕೈತೋಟದ ಸಲಕರಣೆಗಳನ್ನು ನಿರಪಯುಕ್ತ ವಸ್ತುಗಳಿಂದಲೇ ಮಾಡಿಕೊಂಡಿದ್ದೇವೆ. ಕೋಳಿ, ಮೀನು ಮತ್ತು ಮೇಕೆ ಸಾಕಣೆಯನ್ನು ನಮ್ಮ ಕೈತೋಟದಲ್ಲಿ ಮಾಡಬೇಕೆಂದಿದ್ದೇವೆ.

ನಮ್ಮ ಕೈತೋಟದ ಉತ್ಪನ್ನಗಳನ್ನು ನಮ್ಮ ನೆರೆಹೊರೆಯವರೊಂದಿಗೆ,




ಸುರೇಶ್ ತಮ್ಮ ಕೈತೋಟದಲ್ಲಿ ಬೆಳೆದ ಉತ್ಪನ್ನದೊಂದಿಗೆ

ಬಂಧುಗಳೊಂದಿಗೆ, ಹಾಲಿನವರೊಂದಿಗೆ, ಕಸಗುಡಿಸುವವರೊಂದಿಗೆ ಉಚಿತವಾಗಿ ಹಂಚಿಕೊಳ್ಳುತ್ತೇವೆ. ಇದರಿಂದ ನಮ್ಮ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ಮೂಡುವುದರೊಂದಿಗೆ ಅವರಿಗೂ ಕೈತೋಟ ಮಾಡಲು ಉತ್ತೇಜನ ಕೊಟ್ಟಂತಾಗುತ್ತದೆ.

ಕೋವಿಡ್ 19 ಹಾಗೂ ಅದರ ಪರಿಣಾಮವಾಗಿ ಮಾಡಲಾದ ಎರಡು ತಿಂಗಳ ಲಾಕ್‌ಡೌನ್‌ನಲ್ಲಿ ನಮ್ಮ ಕುಟುಂಬವು ಕೈತೋಟದಲ್ಲಿ ಹೆಚ್ಚಿನ ಸಮಯವನ್ನು ಕಳೆಯುವಂತಾಯಿತು. ಇದರಿಂದ ನಮ್ಮ ಕೈತೋಟದಲ್ಲಿ ತರಕಾರಿ, ಹಣ್ಣುಗಳು, ಹೂಗಳು ಮತ್ತು ಸೊಪ್ಪಿನ ಉತ್ಪಾದನೆ ಹೆಚ್ಚಿತು. ಎಲೆಕ್ಟ್ರಾನಿಕ್ ಅಲಾರಂ ಬದಲಿಗೆ ಹಕ್ಕಿಗಳ ಚಿಲಿಪಿಲಿ ನಮ್ಮನ್ನು ಬೆಳಗ್ಗೆ ಎಚ್ಚರಿಸುವ ಅಲಾರಂ ಆಯಿತು. ಹೀಗೆ ನಮ್ಮ ಕೈತೋಟವೇ ನಮ್ಮ ಬದುಕು ಎನ್ನುವುದು ನಮಗೆ ಅರ್ಥವಾಯಿತು.

◆

**Suresh Kanna**
Kudumbam,
No. 113/118, Sundaraj Nagar,
Subramaniyapuram,
Trichy - 620 020, Tamil Nadu, India
E-mail: sureshkanna_kudumbam@yahoo.in

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 22, ಸಂಚಿಕೆ 3, ಸೆಪ್ಟಂಬರ್ 2020.